ಇವತ್ತಿನ ದಿವಸ ಎಂಆರ್‌ಪಿಎಲ್ ಗೆ 12 ವರ್ಷ ಟ್ಯಾಕ್ಸ್ ಹಾಲಿಡೇ ಕೊಟ್ಟಿದ್ದೀರಿ. ಆದರೆ, ಇದಕ್ಕಾಗಿ ಜಾಗಕೊಟ್ಟವರಿಗೆ ಸದರಿ ಕೈಗಾರಿಕೆಗಳಲ್ಲಿ ಇದುವರೆಗೂ ಕೆಲಸ ಕೊಟ್ಟಿಲ್ಲ. ಈ ಸಂದರ್ಭದಲ್ಲಿ ಮತ್ತೊಂದು ವಿಷಯ ಏನೆಂದರೆ, ಖಾಸಗಿ ಕೈಗಾರಿಕೆಗಳಿಗೆ ಜಾಗ ಕೊಟ್ಟ ಮೇಲೆ ಸರ್ಕಾರಕ್ಕೆ ಸದರಿ ಕೈಗಾರಿಕೆಗಳ ಮೇಲೆ ಏನು ಅಧಿಕಾರ ಇದೆ? ಸರ್ಕಾರದ ಯಾವುದೇ ಮಾತನ್ನು ಖಾಸಗಿ ಸಂಸ್ಥೆಯವರು ಕೇಳುತ್ತಿಲ್ಲ.

ಅಧ್ಯಕ್ಷರು:- ತಾವು ಹೇಳಿರತಕ್ಕಂಥ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಸರ್ಕಾರ ಆಲೋಚನೆ ಮಾಡುತ್ತದೆ. ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಿ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ,

"2002ರ ಕರ್ನಾಟಕ ಸ್ಟಾಂಪು(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು)

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು:- "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲಮೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಪಿ. ಶ್ರೀಕಂಠಯ್ಯ(ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, "2002ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ

"2002ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

೩. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕ 2002

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಕೃಷಿ ಮಾರುಕಟ್ಟೆ ಸಚಿವರು):- ಮಾನ್ಯ ಅಧ್ಯಕ್ಷರೆ, "2002ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಕೃಷಿ ಮಾರುಕಟ್ಟೆ ಸಚಿವರು):- ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಸಾಮಾಜಿಕ ನ್ಯಾಯ ಒದಗಿಸಬೇಕೆಂದು ಹಾಗೂ ಎಲ್ಲಾ ಕೋಮಿನವರಿಗೂ ಸಮಾನವಾದ ಅವಕಾಶ ಕೊಡಬೇಕೆಂಬ ಒಂದು ಮಹತ್ವವಾದ ಉದ್ದೇಶದಿಂದ ನಾವು ಸೆಕ್ಷನ್ 10,11, ಮತ್ತು 14 ಹಾಗೂ 15 ಇವುಗಳಿಗೆ ತಿದ್ದುಪಡಿ ತಂದು, ನಮ್ಮ 11 ಜನ ಚುನಾಯಿತ ಪ್ರತಿನಿಧಿಗಳಲ್ಲಿ 5 ಜನರಿಗೆ ಮೀಸಲಾತಿ ಮಾಡಬೇಕು ಎನ್ನತಕ್ಕಂಥ ತಿದ್ದುಪಡಿ ಇದಾಗಿದೆ. ಒಂದು ಎಸ್‌ಸಿ ಮತ್ತು ಒಂದು ಎಸ್‌ಟಿ ಹಾಗೂ ಒಂದು ಬಿಸಿಎ ಮತ್ತು ಒಂದು ಬಿಸಿಬಿ ಹಾಗೂ ಒಂದು ಮಹಿಳೆಗೆ ಎಂದು ನಿಗದಿ ಪಡಿಸಲಾಗಿದೆ. 11ರಲ್ಲಿ 5 ಜನರಿಗೆ ಮೀಸಲಾತಿ ಮಾಡಬೇಕೆಂಬುದು ನಮ್ಮ ಸರ್ಕಾರದ ಉದ್ದೇಶವಾಗಿದೆ.

(ಈ ಹಂತದಲ್ಲಿ ಬಿಜೆಪಿ ಮತ್ತು ಜನತಾ ದಳ-(ಯು) ಸದಸ್ಯರು ಸಭೆಗೆ ಆಗಮಿಸಿದರು)

ದೇಶದಲ್ಲಿ ಯಾವ ರಾಜ್ಯದಲ್ಲಿಯೂ ಇಲ್ಲದಂಥ ಒಂದು ಕ್ರಾಂತಿಕಾರಿ ಮಸೂದೆಯನ್ನು ಸನ್ಮಾನ್ಯ ಎಸ್.ಎಂ. ಕೃಷ್ಣರವರ ನೇತೃತ್ವದ ಕಾಂಗ್ರೆಸ್ ಪಕ್ಷ ಈ ಒಂದು ತಿದ್ದುಪಡಿಯನ್ನು ತಂದಿದೆ. ಇದರ ಜೊತೆಗೆ ಸೆಕ್ಷೆನ್ 39ರಲ್ಲಿ ಚುನಾಯಿತ ಪ್ರತಿನಿಧಿಗಳ ಅವಧಿ 5 ವರ್ಷ ಇರುವುದರಿಂದ, ಈ ಒಂದು ಅವಧಿಯಲ್ಲಿ ಕೆಲವರು ಕೋರ್ಟ್‌ಗೆ ಹೋಗಿರುತ್ತಾರೆ. ಕೋರ್ಟ್‌ನಲ್ಲಿ ಒಂದು ವರ್ಷಗಳ ಕಾಲವಾದರೂ ಅವಧಿ ಇದ್ದುದರಿಂದ ಅದು ನಿಕಾರೆ ಆಗದೇ ಇರುವುದರಿಂದ, ಅವರ ಅಧಿಕಾರವನ್ನು ಉಪಯೋಗ ಮಾಡಲಿಕ್ಕೆ ಅವಧಿ ಇದ್ದುದರಿಂದ ಒಂದು ವರ್ಷದ ಅವಧಿ ಎಂದು ವಿಸ್ತರಣೆ ಮಾಡಬೇಕು ಎನ್ನತಕ್ಕಂಥ ಒಂದು ಹಿನ್ನೆಲೆಯಲ್ಲಿ, ಹಾಗೆಯೇ ಕಾನೂನಿನಲ್ಲಿ ಕೊಟ್ಟಂಥ ಒಂದು ಅವಕಾಶವನ್ನು ಉಪಯೋಗ ಮಾಡತಕ್ಕಂಥ ಒಂದು ಹಿನ್ನೆಲೆಯಲ್ಲಿ 'from the date of Notification' ಬದಲು 'from the date of first meeting' ಎಂದು ಸೆಕ್ಷನ್ 39ಕ್ಕೆ ತಿದ್ದುಪಡಿ ತಂದಿದ್ದೇವೆ. ಹಾಗೆಯೇ ಸನ್ಮಾನ್ಯ ಮುಖ್ಯಮಂತ್ರಿಯವರು ಕಳೆದ ವರ್ಷದ ತಮ್ಮ ಆಯವ್ಯಯ ಭಾಷಣದಲ್ಲಿ ಕಲಂ 65ಕ್ಕೆ ತಿದ್ದುಪಡಿ ತರಲಾಗುವುದೆಂದು ಪ್ರಸ್ತಾಪ ಮಾಡಿದ್ದರು. ಆ ಪ್ರಕಾರ ಈಗ ಏಕ ಹಂತದ ಮಾರುಕಟ್ಟೆ ಶುಲ್ಕವನ್ನು ವಿಧಿಸಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈ ಒಂದು ತಿದ್ದುಪಡಿಯನ್ನು ತರಲಾಗಿದೆ. ಇದರಲ್ಲಿ ಕ್ರಾಪ್ ಸೀಜನ್ 3 ಹಂತದಲ್ಲಿ ನಡೆಯುತ್ತಿರುವುದರಿಂದ ತೊಂದರೆಯಾಗಬಾರದೆಂಬ ದೃಷ್ಟಿಯಿಂದ 'ಕ್ರಾಪ್ ಸೀಜನ್' ಶಬ್ದವನ್ನು ತೆಗೆದು 'ಪೀರಿಯಡ್' ಎನ್ನತಕ್ಕಂಥ ಪದವನ್ನು ಬಳಕೆ ಮಾಡುವ ದೃಷ್ಟಿಯಿಂದ ಸದರಿ ತಿದ್ದುಪಡಿಯನ್ನು ತರಲಾಗಿದೆ. ಇದನ್ನು ಪಾಸ್ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆಗೆ ಸಂಬಂಧಪಟ್ಟಂತೆ ಒಂದು ಕಾನೂನಿಗೆ ತಿದ್ದುಪಡಿಯನ್ನು ತಂದಿದ್ದಾರೆ. ಇದರಲ್ಲಿ ಮುಖ್ಯವಾಗಿ, ಹಿಂದುಳಿದ ವರ್ಗದವರ ಮೀಸಲಾತಿ ಸ್ಥಾನಕ್ಕೆ ಸಂಬಂಧಪಟ್ಟಂತೆ ಒಂದು ತಿದ್ದುಪಡಿ ತಂದಿದ್ದಾರೆ. ಇದರಲ್ಲಿ ನಮ್ಮದೊಂದು ಸಂಶಯ ಏನೆಂದರೆ , ಈ ರೀತಿಯಾದ ಒಂದು ತಿದ್ದುಪಡಿ ತಂದು ಹಿಂದುಳಿದ ವರ್ಗದವರಿಗೆ ಮೀಸಲಾತಿ ತರುವುದಕ್ಕೆ ನಮ್ಮದೇನೂ ಅಡ್ಡಿ ಇಲ್ಲ. ಆದರೆ, ಇದು ನಾಳೆದಿವಸ ಸಂವಿಧಾನ ಬದ್ಧವಾಗಿ ಆಗುತ್ತದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದನ್ನು ತಾವು ವಿಚಾರ ಮಾಡಬೇಕು. ಇವತ್ತು ಕಾರ್ಪೊರೇಶನ್, ಜಿಲ್ಲಾಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಲ್ಲಿ ಮೀಸಲಾತಿಗೆ ಸಂಬಂಧಪಟ್ಟಂತೆ ಸಂವಿಧಾನದಲ್ಲಿ ಅವಕಾಶ ಇದೆ. ಆದರೆ, ಎಪಿಎಂಸಿ.ಗೆ

ಚುನಾಯಿತ ಪ್ರತಿನಿಧಿಗಳು ಆರಿಸಿ ಬರುತ್ತಾರೆ. ಇದರಲ್ಲಿ ಈ ರೀತಿಯಾದ ಒಂದು ಮಿಸಲಾತಿ ಇಡತಕ್ಕಂಥದ್ದು ಸಂವಿಧಾನ ಬದ್ಧವಾಗುತ್ತದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದ್ದರ ಬಗ್ಗೆ ವಿಚಾರ ಮಾಡಬೇಕು. ಇವತ್ತಿನ ದಿವಸ ನಾವು ಸದರಿ ಬಿಲ್ಲನ್ನು ಪಾಸ್ ಮಾಡಿಕೊಡಬಹುದು, ಆನಂತರ ಇದಕ್ಕೆ ಸಂಬಂಧಪಟ್ಟಂತೆ ಕಾನೂನು ಕೂಡ ಆಗುತ್ತದೆ. ಆದರೆ, ನಾಳೆ ದಿವಸ ಯಾರಾದರೂ ಹೈ ಕೋರ್ಟ್‌ಗೆ ಹೋಗಿ ರಿಟ್ ನಲ್ಲಿ ಸಲ್ಲಿಸಬಹುದು. ಆದ್ದರಿಂದ, ಇದು ಸಂವಿಧಾನದ ವ್ಯಾಪ್ತಿಯಲ್ಲಿ ಬರುತ್ತದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ವಿಚಾರ ಮಾಡುವಂತಾಗಬೇಕು. ಈಗ ಬಿಲ್ ಪಾಸ್ ಮಾಡಿ ಮುಂದೆ ಏನಾಗುತ್ತದೆ ಎನ್ನತಕ್ಕಂಥ ರೀತಿಯಲ್ಲಿ ಆಗಬಾರದು.

ಶ್ರೀ ಡಿ.ಬಿ. ಚಂದ್ರೇಗೌಡ:- ನಮ್ಮ ಕಾನೂನು ಇಲಾಖೆಯಲ್ಲಿ ಇದನ್ನು ಪರಿಶೀಲನೆ ಮಾಡಿ ಒಪ್ಪಿಗೆ ಕೊಟ್ಟಿರುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಕೇಳಿರತಕ್ಕಂಥ ಕ್ಲಾರಿಫಿಕೇಶನ್‌ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಇನ್ನೊಂದು ವಿಷಯವನ್ನು ಇಲ್ಲಿ ಹೇಳುವುದೇನೆಂದರೆ, ಪೀರಿಯಡ್‌ಗೆ ಸಂಬಂಧಪಟ್ಟಂತೆ ತಾವೊಂದು ಹಿಂದೆ ಸುಗ್ರೀವಾಜ್ಞೆ ಹೊರಡಿಸಿದ್ದೀರಿ. ಅಂದರೆ, ಸರ್ಕಾರ ಹಿಂದೆ ಸರಿಯಾದ ನಿರ್ಣಯವನ್ನು ಕೈಗೊಳ್ಳದೇ ಇರುವುದರಿಂದ ಅವರು ಕೋರ್ಟ್‌ಗೆ ಹೋದರು.

1.40 ಪಿ.ಎಂ

ಸರ್ಕಾರಕ್ಕೆ ತಪ್ಪಿನಿಂದ ಅವರ ಒಂದು ವರ್ಷದ ಅಧಿಕಾರವನ್ನು ಅನುಭವಿಸುವುದು ಹೋಯಿತು. ಸರ್ಕಾರದ ತಪ್ಪಿನಿಂದ ಇದಾಗಿದೆ ಅಂತಹ ತಪ್ಪನ್ನು ತಾವು ಮುಂದೆ ಮಾಡುವುದಕ್ಕೆ ಹೋಗಬೇಡಿ. ಬೆಳೆ ಬೆಳೆಯುವ ಋತುಮಾನ ಅಥವಾ ಅವಧಿ ಏನಿದೆ, ಅದರ ಬಗ್ಗೆ ಸ್ಪಷ್ಟೀಕರಣ ನೀಡುವಂಥಾಗಬೇಕು. ಆ ಅವಧಿಯಲ್ಲಿ, ಯಾವ ಯಾವ ಪೀರಿಯಡ್‌ಗೆ ಏನೇನು ಎನ್ನುವಂತದ್ದರ ಬಗ್ಗೆ ಸ್ಪಷ್ಟೀಕರಣ ಕೊಡುವಂಥಾದ್ದಾಗಬೇಕು.ಇದನ್ನು ಹೊರತುಪಡಿಸಿ ಮತ್ತೊಂದು ಸೂಚನೆಯನ್ನು ಸಲಹೆಯನ್ನು ನಾನು ಕೊಡಬಯಸುತ್ತೇನೆ. ಹಿಂದಿನ ಸರ್ಕಾರವಿದ್ದಾಗ ಈ ಎಪಿಎಂಸಿಯಿಂದ ರೈತರು ಅಲ್ಲಿಗೆ ಬಂದು ಏನು ವ್ಯವಹಾರವನ್ನು ಮಾಡುತ್ತಾರೆ. ಅವರದು ಆದಾಯ ಇಷ್ಟು ಕಮೀಷನ್ ಇಷ್ಟು ಎಂದು ಬರೆದು ಕೊಂಡಿರುತ್ತೀರಿ. ಆದರಿಂದಾಗಿ ಎಪಿಎಂಸಿಯವರಿಗೆ ಆದಾಯವಿರುತ್ತದೆ. ರೈತರು ಇದ್ದಾರೆಂದು ಎಪಿಎಂಸಿ ಇರುತ್ತದೆ. ಅದರಿಂದಾಗಿ ರೈತರಿಗೆ ನೀವೇನು ಲಾಭವನ್ನು ಮಾಡಿಕೊಡುತ್ತೀರಿ ? ಕೇವಲ ಅವರು ವ್ಯವಹಾರವನ್ನು ಮಾಡುವುದು ಒಂದಾದರೆ, ಅವರು ಬೆಳೆಯುವುದಕ್ಕೆ ಹೊಲವಿದೆ. ಅವರು ಹೊಲಕ್ಕೆ ಹೋಗುವ ದಾರಿಗಳ ಬಗ್ಗೆ, ರಸ್ತೆಗಳ ಬಗ್ಗೆ ಹಿಂದಿನ ಸರ್ಕಾರದವರು ಮಾಡಿದ್ದರು. ಎಪಿಎಂಸಿ ಫಂಡ್‌ನಿಂದ ವರ್ಷಕ್ಕೆ ಇಷ್ಟೆಂದು, 15 ರಿಂದ 20 ಲಕ್ಷ ರೂಪಾಯಿಗಳೆಂದು ಒಂದೊಂದು ಕ್ಷೇತ್ರಕ್ಕೆ ಅವರು ಕೊಡುತ್ತಿದ್ದರು. ಆ ಹಣದಿಂದ ರೈತರು ಓಡಾಡುವಂತಹ ಹೊಲಗಳಿಗೆ, ರಸ್ತೆಗಳ ನಿರ್ಮಾಣ ಮಾಡುವಂತಹ ಕೆಲಸವಾಗುತ್ತಿತ್ತು. ಇದನ್ನು ರಾಜ್ಯದಲ್ಲಿ ಎಷ್ಟೋ ಕಡೆ ನೋಡುತ್ತಿದ್ದೇವೆ. ನಾವು ಇವತ್ತು ಗ್ರಾಮೀಣ ಪ್ರದೇಶದ ಸಂಪರ್ಕವನ್ನು ಮಾಡಬಹುದು, ಇವತ್ತು ರೈತರು ಏನೋ ಹೊಲಕ್ಕೆ ಹೋಗುತ್ತಾರೆ. ಆ ಹೊಲಕ್ಕೆ ಹೋಗುವಂತಹ ದಾರಿ ಸರಿಯಿರುವುದಿಲ್ಲ. ಮಳೆಗಾಲದ ಸಂದರ್ಭದಲ್ಲಿ ಅಲ್ಲಿ ಚಕ್ಕಡಿಗಳು, ಟ್ರಾಕ್ಟರ್‌ಗಳು ಹೋಗುವುದಿಲ್ಲ. ಅಂತಹ ಪರಿಸ್ಥಿತಿಯಿಂದ ಅವರುಗಳು ಒದ್ದಾಡುತ್ತಿದ್ದಾರೆ. ಹಿಂದಿನ ಸರ್ಕಾರದವರು ಇದರ ಬಗ್ಗೆ ಒಳ್ಳೆಯ ಕಲಸವನ್ನು ಮಾಡಿದ್ದರು, ಅದನ್ನು ತಾವು ನಿಲ್ಲಿಸಿಬಿಟ್ಟಿದ್ದೀರಿ,

ಹೊಲಗಳಿಗೆ ಹೋಗುವಂತಹ ರಸ್ತೆಗಳ ನಿರ್ಮಾಣ ಮಾಡುವಂತಹ ರಸ್ತೆಗಳನ್ನು ಇಂಪ್ರೋವ್ ಮೆಂಟ್ ಮಾಡುವಂತಹ ಕೆಲಸವನ್ನು ನಿಲ್ಲಿಸಿಬಿಟ್ಟಿದ್ದೀರಿ. ಇದನ್ನು ತಾವು ದಯವಿಟ್ಟು ಮುಂದುವರಿಸಬೇಕು. ಕೆಲವೊಂದು ಎಪಿಎಂಸಿಗಳು ಬಹಳ ಒಳ್ಳೆಯದು ಇದೆ. ಅದರಿಂದ ಒಳ್ಳೆಯ ಆದಾಯ ಬರುತ್ತದೆ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅದು ಹೋಗಿಬಿಟ್ಟುತ್ತು. ಹಿಂದೆ ನಾವೆಲ್ಲರೂ ನಮ್ಮನಮ್ಮ ಕ್ಷೇತ್ರಗಳಲ್ಲಿ ಸುಮಾರು 30 ರಿಂದ 40 ಲಕ್ಷ ರೂಪಾಯಿಗಳ ಕೆಲಸವನ್ನು ಮಾಡಿಸಿದ್ದೇವೆ. ಹೊಲಗಳಿಗೆ ಹೋಗುವಂತಹ ರಸ್ತೆಗಳ ನಿರ್ಮಾಣ ಮಾಡಿಸಿದ್ದೇವೆ. ಅದನ್ನು ದಯವಿಟ್ಟು ಜಾರಿಗೆ ತೆಗೆದುಕೊಂಡು ಬರಬೇಕು. ಇದರಿಂದಾಗಿ ರೈತರುಗಳಿಗೆ ಅನುಕೂಲವಾಗುತ್ತದೆ. ತಾವು ಅವರಿಗೆ ಅನುಕೂಲವಾಗುವಂತಹ ಕೆಲಸವನ್ನು ಮಾಡಬೇಕು. ಅದರ ಬಗ್ಗೆಯೂ ತಾವು ವಿಚಾರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ):- ಸನ್ಮಾನ್ಯ ಅಧ್ಯಕ್ಷರೆ, ಈ ಎಪಿಎಂಸಿ ಬಿಲ್ ಸುಗ್ರೀವಾಜ್ಞೆ ಹೊರಡಿಸಿ ಅದರ ಮೂಲಕ ಇದನ್ನು ಕಾಯಿದೆ ಮಾಡುವ ದೃಷ್ಟಿಯಿಂದ ಇದನ್ನು ತೆಗೆದುಕೊಂಡು ಬಂದಿದ್ದಾರೆ. ದುರ್ದೈವದಿಂದ ನಾನು ಕಾಯಿದೆ ಎಲ್ಲವನ್ನೂ ಅಭ್ಯಾಸ ಮಾಡಿ ಮಾತನಾಡಬೇಕೆಂದು, ಕಾಯಿದೆಯ ಬುಕ್ಕನ್ನು ನೋಡಿದೆ, ಅದು ಎಲ್ಲಿಯೂ ಸಿಗಲಿಲ್ಲ. ಕೊನೆಗೆ ಆ ಬುಕ್ಕನ್ನು ಖರೀದಿ ಮಾಡುವುದಕ್ಕೂ ಕೂಡ ಕಳುಹಿಸಿದೆ, ಅಲ್ಲಿಯೂ ಇರಲಿಲ್ಲ. ಮಂತ್ರಿಗಳ ಹತ್ತಿರ ನಾನು ಅವತ್ತು ಕೇಳಿದೆ, ಅವರ ಹತ್ತಿರ ಇರಲ್ಲಿಲ್ಲ. ಈಗೇನೋ ತಂದಿರಬಹುದು. ಎಂದು ಕಾಣುತ್ತದೆ. ಏಕೆಂದರೆ ನಾನು ಕೇಳಬಹುದು ಎಂದು ತಿಳಿದುಕೊಂಡು ತಂದಿರಬಹುದು. ಆದರೆ ಮೊನ್ನೆ ಕೇಳಿದಾಗ ಅದು ಇರಲಿಲ್ಲ. ಶ್ರೀ ಡಿ.ಆರ್.ಪಾಟೀಲ್‌ರವರಿಗೆ ನಾನು ಕೇಳಿದೆ ಆಗ ಅವರು ಕಳುಹಿಸಿಕೊಡುತ್ತೇನೆಂದು ಹೇಳಿದರು. ಅವರು ಕಳುಹಿಸಿಕೊಡಲಿಲ್ಲ. ದಯವಿಟ್ಟು ಇವೆಲ್ಲವೂ ಇರಬೇಕಾಗುತ್ತದೆ. ಸುಮ್ಮನೆ ಇದರ ಬಗ್ಗೆ ಮಾತನಾಡುವುದೆಂದರೆ ಆಗುವುದಿಲ್ಲವೆಂದು ಕಾಯಿದೆ ಪುಸ್ತಕವನ್ನು ಹೊರಗಡೆ ತರೋಣವೆಂದರೂ ಕೂಡ ಅದು ಸಿಗಲಿಲ್ಲ. ಇದು ಎಲ್ಲಿಯೂ ಪ್ರಿಂಟ್ ಆಗಿಯೇ ಇಲ್ಲ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್:- ನಮ್ಮ ಲೈಬ್ರರಿಯಲ್ಲಿ ಇದು ಸಿಕ್ಕಿರಬಹುದು;

ಶ್ರೀ ಎಸ್.ಎಸ್. ಪಾಟೀಲ್:- ಇಲ್ಲಾ ಸಾರ್, ಅದ್ಯಾವುದೋ ಹಳೆಯದು ಇಂಗ್ಲಿಷ್ ಪುಸ್ತಕವನ್ನಿಟ್ಟಿದ್ದಾರೆ. ಇದಕ್ಕೂ ಮತ್ತು ಅದಕ್ಕೂ ಸಂಬಂಧವೇ ಇಲ್ಲ. ಅಂಥದ್ದನ್ನು ಲೈಬ್ರರಿಯಲ್ಲಿಟ್ಟಿದ್ದಾರೆ. ಅವತ್ತು ಅದರ ಬಗ್ಗೆ ಚರ್ಚೆಯಾಯಿತು. ದಯವಿಟ್ಟು ಇದರ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ ಈ ಸರ್ಕಾರದವರು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಬಹಳ ಒತ್ತು ಕೊಡುವವರು ಬಹುಶಃ ಇದರ ಬಗ್ಗೆ ಒತ್ತನ್ನು ಕೊಟ್ಟಿದ್ದೀರಿ, ನಾನು ಇಲ್ಲವೆಂದು ಹೇಳುವುದಿಲ್ಲ. ಹಿಂದೆ ನಾವು ಮಾಡಿಕೊಂಡು ಬಂದಿದ್ದೇವೆ. ಗ್ರಾಮೀಣಾಭಿವೃದ್ಧಿ ಮಸೂದೆಗೆ ಮತ್ತೆ ಇಲಾಖೆ ಅಮೆಂಡ್‌ಮೆಂಟ್‌ನ್ನು ತರುತ್ತಿದ್ದೀರಿ; ಎಪಿಎಂಸಿ ಎಂದರೆ ಇವರು ಚುನಾಯಿತ ಪ್ರತಿನಿಧಿಗಳು ಬಹುಶಃ ಇಲ್ಲಿ ಒಬ್ಬಬ್ಬರು ಛೇರ್ಮನ್‌ಗಳಿದ್ದಾರೆ. ಇಲ್ಲಿ ಮಾನ್ಯ ಡಿ.ಆರ್. ಪಾಟೀಲರು ಛೇರ್ಮನ್ ಇದ್ದಾರೆ. ಅವರು ಇದರ ಬಗ್ಗೆ ಮಾತನಾಡಬೇಕಾಗುತ್ತದೆ. ಆದರೆ ಇದರ ಬಗ್ಗೆ ತಾವು ಮಾತನಾಡುವುದಿಲ್ಲ. ಏಕೆಂದರೆ ಆಡಳಿತಪಕ್ಷದವರು ಎಂದರೆ ಮಾತನಾಡುವುದಕ್ಕೆ ಬರುವುದಿಲ್ಲ. ಇಲ್ಲಿ ಯಾವ ಅಧಿಕಾರ ವಿಕೇಂದ್ರೀಕರಣವಿರುವುದಿಲ್ಲ. ಸುಮ್ಮನೆ ಚುನಾಯಿತ ಪ್ರತಿನಿಧಿಗಳು ಅವರು. ಎಲೆಕ್ಷನ್ ಮಾಡುತ್ತಾರೆ. ಅಲ್ಲಿ ಒಂದು ಠರಾವು ಮಾಡಿದರೆ, ಆ ಠರಾವು ಇಲ್ಲಿಗೆ ಒಂದು ಪಾಸ್

ಆಗಬೇಕಾದರೆ ಅದೊಂದು ದೊಡ್ಡ ಛಡಿ ಬಹುಶಃ ತಮಗೆ ಗೊತ್ತಿರಬೇಕು. ರೈತ ಸಂಜೀವಿನಿ" ಎಂದು ಮಾಡಿದ್ದಾರೆ. ಅದನ್ನು ನಮ್ಮ ಸರ್ಕಾರದವರು ಅಧಿಕಾರದಲ್ಲಿದ್ದಾಗ ಮಾಡಿದ್ದೆವು. ಅವರಿಗೆ ಕಾಲು ಮುರಿದಾಗ ತಕ್ಷಣ ಅವರಿಗೆ ಹಣ ಕೊಡಬೇಕಾಗುತ್ತದೆ. ಆ ಎಲ್ಲಾ ಅಧಿಕಾರವನ್ನು ಇಲ್ಲಿಯೇ ಇಟ್ಟು ಕೊಂಡಿದ್ದಾರೆ. ಸಂಪೂರ್ಣವಾಗಿ ಅದೆಲ್ಲವೂ ಇಲ್ಲಿಗೆ ಬರಬೇಕಾಗುತ್ತದೆ. ಆಮೇಲೆ ತಾವು ಬಂದಾಗ ಮೊನ್ನೆ ಒಂದು ಅವರ ಬಿಲ್ಡಿಂಗ್‌ಗೆ ಬಣ್ಣ ಹಚ್ಚಿದ್ದು, ಅವತ್ತು ತಾವು ಇದ್ದೀರಿ, ಇಲ್ಲ ಅದನ್ನು ಕುಳಹಿಸಿ ಕೊಡಿ, ಕೊಡುತ್ತೇನೆಂದು ಹೇಳಿದರು. ಒಂದು ವರ್ಷವಾದರೂ ಇನ್ನೂ ಅಡ್ಡಾಡುತ್ತಿದ್ದಾರೆ. ಬಣ್ಣಹಚ್ಚುವುದಕ್ಕೂ ಸಹ ಅವರಿಗೆ ಅಧಿಕಾರವಿಲ್ಲ. ಈ ತರಹದ ಕಾಯಿದೆ ಇರುವುದರಲ್ಲಿ ಯಾವ ಅರ್ಥವೂ ಇಲ್ಲ. ದಯವಿಟ್ಟು ಮುಂದಿನ ಸಲವಾದರೂ ತಾವು ತೀವ್ರದಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡಬೇಕು. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಹೇಗೆ ವಿಕೇಂದ್ರೀಕರಣದ ವ್ಯವಸ್ಥೆ ಇದೆ ಅದೇ ರೀತಿಯಲ್ಲಿ ಈ ಎಪಿಎಂಸಿಗೂ ಕೂಡ ಮಾಡಿ, ಅವರು ಚುನಾಯಿತ ಪ್ರತಿನಿಧಿಗಳು, ಅವರು ಚುನಾವಣೆಯನ್ನು ಎದುರಿಸಿ ಬರುತ್ತಾರೆ. ಇಲ್ಲೆಲ್ಲಾ ರಿಸರ್ವೇಶನನ್ನು ಇಟ್ಟಿದ್ದೀರಿ, ಎಲ್ಲವನ್ನು ಇಟ್ಟಿದ್ದೀರಿ, ಅವರಿಗೆ ಯಾವ ಅಧಿಕಾರವು ಇಲ್ಲ, ಈ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ನಾನು ಹೇಳಬೇಕೆಂದು ಇದ್ದೆ, ನನಗೆ ಕಾಯಿದೆ ಬುಕ್ ಸಿಗದೆ ಇದ್ದುದಕ್ಕೆ ಹೇಳುವುದಕ್ಕಾಗುವುದಿಲ್ಲ. ದಯವಿಟ್ಟು ಮಾನ್ಯ ಕಾನೂನು ಸಚಿವರು ತಾವು ಎಲ್ಲರು ಕೂಡಿಕೊಂಡು, ಅಧಿಕಾರ ವಿಕೇಂದ್ರೀಕರಣವನ್ನು ಮಾಡಬೇಕು. ಇಲ್ಲಿ ತಾವು ಏನು ಮಾಡಿದ್ದೀರೆಂದರೆ, ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಕೆಲವು ಎಪಿಎಂಸಿಗಳನ್ನು ಕೈಯಲ್ಲಿ ತೆಗೆದುಕೊಳ್ಳಬೇಕೆಂದು ತಿಳಿದುಕೊಂಡು ಅವಿಶ್ವಾಸ ಗೊತ್ತುವಳಿಗೆ 2/3ರಷ್ಟು ಬಹುಮತವೆಂದು ಮಾಡಿದ್ದೀರಿ. ದಯವಿಟ್ಟು ಅದು ತಪ್ಪು, ತಾವು ಇಲ್ಲೇನು, ನಮ್ಮ ಪಕ್ಷದ ಅಡಿಯಲ್ಲಿ ಆರಿಸಿಬರುತ್ತಾರೆ. ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಇಟ್ಟಿದ್ದೀರಲ್ಲಾ ಅದು ಸದರಿ ಇದೆ. ಇದು ಪಕ್ಷದ ಅಡಿಯಲ್ಲಿ ಬರುವುದಿಲ್ಲ. ಸುಮ್ಮನೆ ಅಲ್ಲಿ ದಿನಾ ಗೊಂದಲವಾಗುತ್ತದೆ. ಪುನಃ ಅಲ್ಲಿ ಮೊದಲು ಇದ್ದ ಹಾಗೆ 2/3 ರಷ್ಟು ಮೆಜಾರಿಟಿ ಎಂದು ಮಾಡುವುದು ಯೋಗ್ಯವೆಂಬುದು ನನ್ನದೊಂದು ಸಲಹೆ. ಇದರ ಬಗ್ಗೆ ತಾವು ವಿಚಾರವನ್ನು ಮಾಡಬೇಕು. ರಸ್ತೆಯ ಬಗ್ಗೆ ಏನು ಹೇಳಿದ್ದಾರಲ್ಲಾ, ಬಹುಶಃ ಎಪಿಎಂಸಿ ಅಂದ ಕೂಡಲೇ ಉದಾಹರಣೆಗಾಗಿ ಬೆಂಗಳೂರು ಇದೆ, ಅದು ಬೆಂಗಳೂರಿನದಷ್ಟೇ ಅಲ್ಲಾ ಆ ದುಡ್ಡು, ಇಡೀರಾಜ್ಯದ ದುಡ್ಡು ಬಂದು ಇಲ್ಲಿಗೆ ಬೀಳುತ್ತದೆ. ಗದಗ್ ಇರುತ್ತದೆ. ಹುಬ್ಬಳ್ಳಿ ಇರುತ್ತದೆ. ಬೇರೆ ಬೇರೆ ಕಡೆಗಳಿಂದ ಮಾಲು ಬಂದು ಇಲ್ಲಿಗೆ ಬೀಳುತ್ತದೆ. ಅದು ಎಲ್ಲರಿಗೂ ಸಂಬಂಧವಾಗಬೇಕು. ಆ ರೀತಿಯಾದ ಒಂದು ಕಾಯಿದೆಯ ಅಡಿಗೆ ತಿದ್ದುಪಡಿಯನ್ನು ತರಬೇಕು, ಹಿಂದೆ ನಮ್ಮ ಸರ್ಕಾರವಿದ್ದಾಗ, ನಾವು ಹೇಳಿದ ಹಾಗೆ ದುಡ್ಡನ್ನು ಕೊಡಿಸಿದೆವು, ಅದನ್ನು ಸಾಲವೆಂದು ಮಾಡಿ ವಸೂಲಿ ಮಾಡುವುದಕ್ಕೆ ಹಚ್ಚಿದ್ದಾರೆ. ಯಾವ ಯಾವ ಎಪಿಎಂಸಿಯಿಂದ ಕೊಡಿಸಿದ್ದೀರಿ, ಸಣ್ಣ ಸಣ್ಣ ಎಪಿಎಂಸಿಗಳು ಬಡ್ಡಿ ಮತ್ತು ಅಸಲನ್ನು ತುಂಬುವುದಕ್ಕೆ ಆಗುವುದಿಲ್ಲ, ಅದನ್ನೂ ಕೂಡ ತಾವು ತಿದ್ದುಪಡಿಯನ್ನು ಮಾಡಿ, ಆ ಸಾಲವನ್ನು ತೆಗೆದು ಪುನಃ ಅವರಿಗೆ ಎಲ್ಲವನ್ನೂ ಕೊಡುವುದರಿಂದ ಸರಿಸಮಾನವಾಗಿ ಹಂಚಿಕೆಯಾಗುವಂತೆ ವ್ಯವಸ್ಥೆ ಮಾಡಬೇಕೆಂದೂ ಕೂಡ ತಮಗೆ ಈ ಮೂಲಕ ಹೇಳಿ ದಯವಿಟ್ಟು ಕೂಡಲೇ ಅಧಿಕಾರ ವಿಕೇಂದ್ರೀಕರಣವನ್ನು ಇದರಲ್ಲಿ ಮಾಡಿ. ಇದು ತಮ್ಮ ಅವಧಿಯಲ್ಲಾದರೂ ಆಗಲಿ ಅವರಿಗೆ ಯಾವ ಅಧಿಕಾರವೂ ಸಹ ಇಲ್ಲ, ಸುಮ್ಮನೆ ಹೆಸರಿಗೆ ಬೋರ್ಡ್, ಅಧ್ಯಕ್ಷರು

ಎಲೆಕ್ಷನ್‌ನಲ್ಲಿ ಆರಿಸಿ ಬರುತ್ತಾರೆ. ಒಂದು ಠರಾವು ಮಾಡಿ 10 ರೂಪಾಯಿ ಖರ್ಚು ಮಾಡಬೇಕಾದರೆ ಇಲ್ಲಿಗೆ ಬೆಂಗಳೂರಿಗೆ ಬರಬೇಕಾಗುತ್ತದೆ. ಯಾವ ವ್ಯವಸ್ಥೆ ಇದು? ದಯವಿಟ್ಟು ತಾವು ಇದನ್ನು ತಿದ್ದಬೇಕೆಂದು ಸಲಹೆಯನ್ನು ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕನಕಪುರ):– ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ವಿಧೇಯಕಕ್ಕೆ ತಿದ್ದುಪಡಿಯನ್ನು ಏನು ತಂದಿದ್ದಾರೆ ಇದನ್ನು ಭಾಗಶಃ ನಾವು ಸ್ವಾಗತ ಮಾಡುತ್ತೇವೆ. ಕಾರಣವೇನೆಂದರೆ, ಎಪಿಎಂಸಿಗಳಲ್ಲಿ ಹಿಂದುಳಿದ ವರ್ಗಗಳ ಕೃಷಿಕರಿಗೆ ಪ್ರಾತಿನಿಧ್ಯವಿರಲಿಲ್ಲ. ಆ ದೃಷ್ಟಿಯಿಂದಾಗಿ ಈ 'ಎ' ವರ್ಗವನ್ನು ಸೃಷ್ಟಿ ಮಾಡಿ ಇದು ಹಿಂದುಳಿದ ವರ್ಗದವರಿಗೂ ಸಹಿತ ಅವಕಾಶವನ್ನು ಮಾಡಿಕೊಡುವಂತಹ ಕಾನೂನನ್ನು ಏನು ಮಾಡಿದ್ದಾರೆ ಅದನ್ನು ನಮ್ಮ ಪಕ್ಷದ ಮತಿಯಿಂದ ನಾವು ಸ್ವಾಗತವನ್ನು ಮಾಡುತ್ತೇವೆ. ಆದರೆ ಇದರಲ್ಲಿ ಏನು ಮಾಡಿದ್ದಾರೆಂದರೆ ಇದನ್ನು 'ಎ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಯೂ ಲಭ್ಯವಿಲ್ಲದಿದ್ದಲ್ಲಿ ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನವನ್ನು 'ಬಿ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಯಿಂದಲೂ ಸಹ ತುಂಬತಕ್ಕದ್ದು ಎಂದು ಹೇಳಿದ್ದಾರೆ. ಇದನ್ನು ವಿತ್‌ಡ್ರಾ ಮಾಡಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ, ಎಲ್ಲಾ ಕಡೆಗಳಲ್ಲೂ ಸಹಿತ ಸಾಮಾನ್ಯವಾಗಿ ಎಪಿಎಂಸಿಗಳಲ್ಲಿ ನನಗೆ ಗೊತ್ತಿರುವ ಹಾಗೆ 3-4 ಪಂಚಾಯಿತಿಗಳು ಸೇರಿದರೆ ಒಂದು ವಾರ್ಡ್ ಆಗುತ್ತದೆ. ಅಥವಾ ಒಬ್ಬ ಮೆಂಬರ್ ಏರಿಯಾ ಆಗುತ್ತದೆ. ಆ ಏರಿಯಾದಲ್ಲಿ ಒಬ್ಬನೂ 'ಎ' ವರ್ಗದವನು ಸಿಗದೆ ಇರತಕ್ಕಂತಹ ಸಂದರ್ಭ ಇರುವುದಿಲ್ಲ. ಆದೇನಾಗುತ್ತದೆಂದರೆ, ನಮ್ಮಲ್ಲಿ ಎಪಿಎಂಸಿ ಎಲೆಕ್ಷನ್ ಆಗುತ್ತದೆ. ನಮ್ಮ ನಾಗಪ್ಪನವರು ಮಂತ್ರಿಗಳಾಗಿದ್ದಾಗ, ನಮ್ಮ ತಾಲ್ಲೂಕಿನಲ್ಲಿ ಮುಂಚೆ ಎಪಿಎಂಸಿಗಳಿರಲಿಲ್ಲ. ಚನ್ನಪಟ್ಟಣದಲ್ಲಿ ಇತ್ತು. ಆ ಎಪಿಎಂಸಿಯನ್ನು ಕನಕಪುರಕ್ಕೆ ಮಾಡಿಸಿದ್ದೇವೆ. ಈಗ ಏನು ಮಾಡಿದ್ದಾರೆಂದರೆ, ತಹಸೀಲ್ದಾರ್ ಬಹಳ ಬುದ್ಧಿವಂತಿಕೆಯಿಂದ, ತಮಗೆ ರಾಜಕೀಯದ ಅನುಕೂಲವಾಗುವ ರೀತಿಯಲ್ಲಿ, ನಮ್ಮ ಮಂತ್ರಿಗಳು ಏನು ಹೇಳಿದ್ದಾರೋ ಗೊತ್ತಿಲ್ಲ, ಅನುಕೂಲವಾಗುವ ರೀತಿಯಲ್ಲಿ ಈ ವರ್ಗಗಳನ್ನು ಮಾಡತಕ್ಕಂತಹ ಸಂದರ್ಭದಲ್ಲಿ ಆಡಳಿತ ಪಕ್ಷದವರಿಗೆ ಅನುಕೂಲವಾಗುವ ಹಾಗೆ ಮಾಡಿಕೊಂಡು ಬಂದಿದ್ದಾರೆ. ಇದು ಸರಿಯಲ್ಲ. ಈಗ 'ಎ' ವರ್ಗದವರು ಇಲ್ಲದೆ ಇರುವ ಕಡೆ ಪ್ರಶ್ನೆ ಬರುತ್ತದೆ ಮಾನ್ಯ ಕಾಗೋಡು ತಿಮ್ಮಪ್ಪನವರೆ, ಇದರ ಬಗ್ಗೆ ದಯವಿಟ್ಟು ತಾವು ಹೇಳಬೇಕು. ಅದಕ್ಕೋಸ್ಕರ ಇದೊಂದು ಅಡ್ಜಸ್ಟ್‌ಮೆಂಟ್ ನೋಡಿ ಇದಾಗಬಾರದು. ಡೈಲ್ಯೂಟಾಗುತ್ತದೆ. ಯಾವ ಇಂಟೆನ್‌ಷನ್‌ನಿಂದ ನೀವು 'ಎ' ವರ್ಗಕ್ಕೆ ಕೊಡಬೇಕೆಂದು ಇದ್ದೀರಿ ಆ ಉದ್ದೇಶ ಸಫಲವಾಗುವುದಿಲ್ಲ. ಷೆಡ್ಯೂಲ್ ಕ್ಯಾಸ್ಟ್‌ಗೆ ರಿಸರ್ವೇಶನ್ ಮಾಡತಕ್ಕಂಥದ್ದು, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಇದು ಹಿಂದೆ ಇರಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಆ ವರ್ಗದ ವ್ಯಕ್ತಿ ಇಲ್ಲದಿದ್ದರೆ ಏನು ಮಾಡುತ್ತಿದ್ದೀರಿ? ಒಂದು ವೇಳೆ ಇಲ್ಲದೆ ಇದ್ದರೆ ಅದಕ್ಕೆ ಮತ್ತೊಂದು ಸಲ ಅಮೆಂಡ್‌ಮೆಂಟ್ ತರುವುದಾ? ಯಾವುದು ಉತ್ತಮ ಎಂದು? 'ಎ' ವರ್ಗದ ವ್ಯಕ್ತಿ ಇಲ್ಲದೆ ಇದ್ದರೆ ಅದನ್ನು ಹಾಗೆಯೇ ಬಿಡುವುದು ಉತ್ತಮವೋ? ಅಥವಾ 'ಎ' ವರ್ಗದ ವ್ಯಕ್ತಿ ಇಲ್ಲದೆ ಇದ್ದಾಗ ಏನು ಮಾಡಬೇಕು ಎಂದು ಹೇಳುವುದು ಉತ್ತಮವೋ? ಇದನ್ನು ನೀವು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನನ್ನ ಅಭಿಪ್ರಾಯದಲ್ಲಿ ಇದು ಅನಾವಶ್ಯಕ. ನನಗೆ ಗೊತ್ತಿರುವ ಹಾಗೆ ಕರ್ನಾಟಕದ 5000 ಪಂಚಾಯಿತಿಗಳಲ್ಲೂ, 4 ಮತ್ತು 5 ಪಂಚಾಯಿತಗಳು ಸೇರಿದರೆ ಒಂದು ಮೆಂಬರ್‌ದ್ದು 'ಎರಿಯಾ' ಆಗುತ್ತದೆ ಅದೆಲ್ಲವೂ ಒಂದು ಏರಿಯಾದಲ್ಲಿರುತ್ತದೆ. ಅಲ್ಲಿ 'ಎ' ವರ್ಗಕ್ಕೆ ಮುಸಲ್ಮಾನರು ಸೇರುತ್ತಾರೆ. ಕುರುಬರು ಸೇರುತ್ತಾರೆ. ಗೊಲ್ಲರು ಸೇರುತ್ತಾರೆ. ಅನೇಕ ಹಿಂದುಳಿದ ವರ್ಗದವರು ಈ ವರ್ಗಕ್ಕೆ ಸೇರದೆ ಇರುವ ಏರಿಯಾ ಯಾವುದು ಇದೆ ಹೇಳಿ? ಖಾತಾದಾರರಾಗಬೇಕು. ಅಟ್‌ಲೀಸ್ಟ್ 20 ಗುಂಟೆ ಜಮೀನು ಇರತಕ್ಕಂಥವರು ಇರುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಗ್ರಾಮೀಣ ಪ್ರದೇಶದಿಂದ ಬರಬೇಕು, ಎರಡೂ ಆಗುವುದು ಬಹಳ ಕಷ್ಟವಿದೆ. ಅದಕ್ಕೆ ಒಂದು ಕ್ಲಾಸ್ ಏನು ಮಾಡಿದ್ದೇವೆಂದರೆ, ಸೇವಿಂಗ್ ಕ್ಲಾಜ್ ತರಹ ಮಾಡಿದ್ದೇವೆ. It is only a saving clause.

ಶ್ರೀ ಎಸ್.ಎಸ್. ಪಾಟೀಲ್:- ಅವರು ಇವರು ಕೂಡಿ ಅವರು ಬರಲಾರದ ಹಾಗೆ ಮಾಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಅದಕ್ಕೋಸ್ಕರವೇ ಮೀಸಲಾತಿ.

ಶ್ರೀ ಎಸ್.ಎಸ್. ಪಾಟೀಲ್:- ಅದಕ್ಕೆ ನಾನು ಹೇಳುವುದು. ಎ ವರ್ಗದವರಿಗೆ ಇರಬೇಕೆಂದು ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾವು ಪ್ರೊಟೆಸ್ಟ್ ಮಾಡಿ ಹೊರಗೆ ಹೋದಮೇಲೆ ಮಾನ್ಯ ದೇಶಪಾಂಡೆಯವರು ಏನೇನೋ ಮಾತನಾಡಿದಂತೆ. ಅವರು ಏನು ಮಾತನಾಡಿದರು ಎಂದು ನಾನು ಕೇಳಿಸಿಕೊಳ್ಳಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ಏನು ಹೇಳಿದಿರಿ ಅದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ(ಭೂರೀ ಕೈಗಾರಿಕಾ ಸಚಿವರು):- ನಾನು ಬಹಳ ಗೌರವದಿಂದ ಮಾತನಾಡಿದ್ದೇನೆ. ಅದು ರೆಕಾರ್ಡ್‌ನಲ್ಲಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ರಾಜಕೀಯವಾಗಿ ಏನು ಹೇಳಿದ್ದೀರಿ ಅದಕ್ಕೆ ರಾಜಕೀಯವಾಗಿ ಉತ್ತರ ಕೊಟ್ಟಿದ್ದಾರೆ ಅಷ್ಟೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತೆ ಎಲ್ಲರೂ ಬಂದಿದ್ದಾರೆ ಅವರು ಸ್ವಲ್ಪ ಕಿವಿಗೊಟ್ಟು ಕೇಳಿಸಿಕೊಳ್ಳಬೇಕೆಂದು ಇದನ್ನು ಹೇಳುತ್ತಿದ್ದೇನೆ. ಏಕೆಂದರೆ ವಿರೋದ ಪಕ್ಷದವರೆಲ್ಲಾ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಾರೆಂದು ಇವರು ಇಲ್ಲಿ ಹೇಳುತ್ತಿದ್ದಾರೆ. ದೆಹಲಿಯಲ್ಲಿ ಅವರು ಹಾಗೆ ಹೇಳುತ್ತಿದ್ದಾರೆ. ಹೊಸ ಸ್ಲೋಗನ್ ಇದು. ಮತ್ತೆ ರಚನಾತ್ಮಕ ಕೆಲಸಗಳಿಗೆಲ್ಲಾ ಅಡ್ಡಿ ಬರುತ್ತಾರೆಂದು ಹೇಳುತ್ತಾರೆ. ಸ್ವಾಮಿ ನೀವು ಈಗ ಮೀಸಲಾತಿಯನ್ನು ತಂದಿದ್ದೀರಿ ಅದನ್ನು ಅಪ್ರಿಷಿಯೇಟ್ ಮಾಡುತ್ತೇವೆ. ಅದನ್ನು ನಾವು ವೆಲ್ ಕಮ್ ಮಾಡಿದ್ದೇವೆ. ಅದನ್ನು ಸ್ವಲ್ಪ ಕೇಳಿಸಿಕೊಳ್ಳಬೇಕಲ್ಲವೇ? ನನ್ನ ಅಭಿಪ್ರಾಯದಲ್ಲಿ ಇದು ಅನಾವಶ್ಯಕ ಅಮೇಲೆ ನಾನು ಗೌರವಾನ್ವಿತ ಮಂತ್ರಿಗಳಲ್ಲಿ ಮನವಿ ಮಾಡಿ ಕೊಳ್ಳತಕ್ಕದ್ದು. ನಮ್ಮ ಸರ್ಕಾರದಲ್ಲಿ ಮಾನ್ಯ ಎಸ್.ಎಸ್. ಪಾಟೀಲರು ಹೇಳಿದ ಹಾಗೆ ರೈತರಿಗೆ ಅನುಕೂಲವಾಗತಕ್ಕ ಅನೇಕ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ನಾನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದನ್ನು ಮತ್ತೆ ಪುನರಾವರ್ತನೆ ಮಾಡಲಿಕ್ಕೆ ಬಯಸುವುದಿಲ್ಲ. ರಸ್ತೆಗಳಿಗೆ ಕೊಡುತ್ತಿದ್ದ ದುಡ್ಡಿ 15 ಲಕ್ಷ 20 ಲಕ್ಷ ರೂಪಾಯಿಗಳು ಆ ಕಾರ್ಯಕ್ರಮ ಇವತ್ತು ರದ್ದಾಗಿದೆ. ಮತ್ತೆ ಹಾವು ಕಚ್ಚಿ ಸತ್ತರೆ, ಕಾಲು ಕಳೆದುಕೊಂಡರೆ ಕಣ್ಣು

ಕಳೆದು ಕೊಂಡರೆ ಕೊಡುತ್ತಿದ್ದ ದುಡ್ಡು ಏನಿದೆ ಅದು ಸರಿಯಾದ ರೂಪದಲ್ಲಿ ಬರುತ್ತಿಲ್ಲ. ಅದಕ್ಕೋಸ್ಕರ ಯಾವ ಎಪಿಎಂಸಿಗಲಿಗೆ ಶಕ್ತಿಯಿದೆ ಆ ಹಣವನ್ನು ತಕ್ಷಣ ಕೊಡುವಹಾಗೆ ಮಾಡತಕ್ಕದ್ದು, ಆ ಅಧಿಕಾರವನ್ನು ಅವರಿಗೆ ಕೊಡಬೇಕೆಂದು ಅವರು ಹೇಳಿದರು. ಅವರು ಡೈರಕ್ಟರ್ ಹತ್ತಿರ ಬರಬೇಕು, ಅದನ್ನು ಅವರು ರಿಲೀಸ್ ಮಾಡಬೇಕು. ಅದನ್ನು ಮಾಡುವುದಕ್ಕೆ ಬದಲಾಗಿ ಅದು ಹೇಗೂ ಎಪಿಎಂಸಿ ದುಡ್ಡು ಅಲ್ಲೇ ಕೊಡುವ ಹಾಗೆ ನೀವು ಅಧಿಕಾರ ವಿಕೇಂದ್ರೀಕರಣ ಮಾಡಿಕೊಟ್ಟರೆ ತಕ್ಷಣ ಅವರಿಗೆ ಅನುಕೂಲವಾಗುತ್ತದೆನ್ನುವ ಸಲಹೆಯನ್ನು ಕೊಡುತ್ತೇನೆ.

ಶ್ರೀ ಬಿ. ಸೋಸಶೇಖರ್ (ಮಳವಳ್ಳಿ):- ಮಾನ್ಯ ಅಧ್ಯಕ್ಷರೆ, ಈವೊಂದು ಚಿಂತನೆ ಏನಿದೆ, ಅಂದರೆ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಪರಿಶಿಷ್ಟವರ್ಗದವರಿಗೆ ಮೀಸಲಾತಿಯನ್ನು ಕಲ್ಪಿಸತಕ್ಕ ವಿಧೇಯಕ ಏನಿದೆ ಅದನ್ನು ನಾನೂ ಕೂಡ ಸ್ವಾಗತ ಮಾಡುತ್ತೇನೆ. ಆದರೆ ನಮ್ಮ ಅನುಭವಗಳ ಪ್ರಕಾರ ನಮ್ಮನಾಯಕರಾದ ಮಾನ್ಯ ಸಿಂಧ್ಯಾರವರು ಹೇಳಿದಹಾಗೆ, ಸ್ಥಳೀಯವಾಗಿ ರಾಜಕೀಯ ಏನಾಗುತ್ತದೆಂದರೆ ಏನು ಆಪ್ಷನ್ ಇಟ್ಟಿದ್ದೀರಿ, ಆ ಆಪ್ಸ್ನ್ ಅನ್ನು ದುರುಪಯೋಗ ಮಾಡಿ ಕೊಳ್ಳತಕ್ಕ ಸಾಧ್ಯತೆಗಳು ಬಹಳ ಹೆಚ್ಚು ಇವೆ. ಮೀಸಲಾತಿಯನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದವರಿಗೂ ಇಟ್ಟಿದ್ದೀರಿ. ನನಗಾದರೂ ಅನಿಸುತ್ತದೆ.Provided that if no person belonging to Scheduled/Caste is available ಅಂದರೆ ಯಾವ ಊರಿನಲ್ಲಿ ಪರಿಶಿಷ್ಟ ಜಾತಿಯವರು ಇರುವುದಿಲ್ಲ? ಎಲ್ಲಾ ಊರುಗಳಲ್ಲೂ ಇದ್ದೇ ಇರುತ್ತಾರೆ. ಒಂದು ಸಾರಿ it can be given to Scheduled Tribe ಎಂದು ಮಾಡಿದಾಗ ಉದ್ದೇಶಪೂರ್ವಕವಾಗಿ ಷೆಡ್ಯುಲ್ಡ್ ಕಾಸ್ಟ್ನವರನ್ನು ಬಿಟ್ಟು ಷೆಡ್ಯೂಲ್ಡ್ ಟ್ರೈಬ್ ನವರನ್ನು ಯಾರೋ ಒಬ್ಬರು ಅವರು ಹೇಳಿದಹಾಗೆ ಕೇಳತಕ್ಕವರನ್ನು ಒಬ್ಬರನ್ನು ಆರಿಸಿಕೊಳ್ಳತಕ್ಕದ್ದು ಆಗುತ್ತದೆ. ಅದು ಆಗಲಿಕ್ಕೆ ಸಾಧ್ಯತೆಯಾಗುತ್ತದೆ. ಅದೇರೀತಿ ಬ್ಯಾಕ್ವರ್ಡ್ ಕ್ಲಾಸ್ನಲ್ಲೂ ಆಗಲಿಕ್ಕೆ ಸಾಧ್ಯತೆಯಾಗುತ್ತದೆ. ಆದ್ದರಿಂದ ಆಪ್ಷನ್ಸ್ ಇಡದೆ, one should be given to Scheduled Caste or A-Category, ಎಂದು ಸ್ಪೆಸಿಫಿಕ್ ಆಗಿ ಮಾಡತಕ್ಕದ್ದು ಒಳ್ಳೆಯದು. ಆ ಆಪ್ಷನ್ಸ್ ಏನಿದೆ ಇದನ್ನು ತೆಗೆಯಬೇಕೆಂದು ನನ್ನ ಆಗ್ರಹವಿದೆ. ಬೇರೆ ವಿಚಾರಗಳಲ್ಲಿ ನಾನು ಅವರಿಗೆ ಸಹಮತ ವ್ಯಕ್ತ ಮಾಡುತ್ತೇನೆ. ನಮ್ಮ ಸರ್ಕಾರದಲ್ಲಿ ಮಾಡಿದಂತಹ ಎಪಿಎಂಸಿ ರಸ್ತೆಗಳಿಗೋಸ್ಕರ ಹಣ ಇಡಲಾಗಿತ್ತು. ಆದರಿಂದ ಸ್ವಲ್ಪವಾದರೂ ರಸ್ತೆಗಳ ಅಭಿವೃದ್ಧಿ ಆಗುತ್ತಿತ್ತು. ಅದನ್ನು ಮತ್ತೆ ಜಾರಿಗೆ ತರಬೇಕೆಂದು ಹೇಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ (ಗದಗ್):- ಮಾನ್ಯ ಅಧ್ಯಕ್ಷರೆ, ಮಾನ್ಯ ಮಾರುಕಟ್ಟೆ ಸಚಿವರು ತಂದಂತಹ ಮಾರುಕಟ್ಟೆ ನಿಯಂತ್ರಣ ತಿದ್ದುಪಡಿ ಮಸೂದೆಯನ್ನು ಸ್ವಾಗತ ಮಾಡುತ್ತಾ, ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮೊದಲು ಈ ಕಾನೂನಿನಲ್ಲಿ ಈ ಎರಡು ಸೀಟು ಏಸ್ಸಿ ಅಥವಾ ಎಸ್ಟಿ ರಿಸರ್ವೇಶನ್ ಇತ್ತು. ಎಸ್ಸಿಗೆ ಒಂದು ಆಗಬೇಕು ಎಸ್ಟಿಗೆ ಒಂದು ಆಗಬೇಕೆನ್ನುವ ದೃಷ್ಟಿಯಿಂದ ಈಗ ಆ ತಿದ್ದುಪಡಿಯನ್ನು ತಂದಿದ್ದಾರೆ. ಎಸ್ಸಿ ಇಲ್ಲದಿದ್ದಲ್ಲಿ ಎಸ್ಟಿಗೆ ಇಲ್ಲದಿದ್ದರೆ ಎಸ್ಸಿಗೆ ಸಿಗಲಿ ಎಂದು ತಿದ್ದುಪಡಿ ಇದೆ. ಎಸ್ಸಿ ಇದ್ದರೆ ಎಸ್ಟಿಗೆ ಹೋಗುವ ಪ್ರಶ್ನೆ ಬರುವುದೇ ಇಲ್ಲ. ಎಸ್ಟಿ ಇದ್ದಲ್ಲಿ ಎಸ್ಸಿಗೆ ಹೋಗುವ ಪ್ರಶ್ನೆ ಬರುವುದಿಲ್ಲ. ಎರಡೂ ವರ್ಗದವರಿಗೆ ಅನುಕೂಲವಾಗುವಂತಹ ಈ ತಿದ್ದುಪಡಿಯನ್ನು ನಾವು ಸ್ವಾಗತ ಮಾಡುತ್ತಿದ್ದೇವೆ. ಇದರ ಜೊತೆಗೆ ಹಿಂದುಳಿದ ವರ್ಗದವರಿಗೆ ರಿಸರ್ವೇಶನ್ ತಂದಿದ್ದಾರೆ.

ಮಾನ್ಯ ಸಚಿವರ ಈ ಕ್ರಮವನ್ನು ನಾನು ಬಹಳಷ್ಟು ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಪ್ರಸಂಗ ಬಂದರೆ, ಅನುಕೂಲವಾದರೆ ಬರೇ ಸದಸ್ಯತ್ವಕ್ಕೆ ಮಾತ್ರ ರಿಸರ್ವೇಶನ್ ಅಲ್ಲದೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ರಿಸರ್ವೇಶನ್ ತಂದರೆ ಸಾಮಾಜಿಕ ನ್ಯಾಯವನ್ನು ಸರಿಯಾಗಿ ಒದಗಿಸಿದಹಾಗೆ ಆಗುತ್ತದೆ. ಆ ಬಗ್ಗೆ ಸಚಿವರು ವಿಚಾರ ಮಾಡಬೇಕೆನ್ನುವ ಸೂಚನೆಯನ್ನು ಅವರಿಗೆ ಕೊಟ್ಟು, ಮಲ್ಟಿಸೆಸ್ ಪಾಯಿಂಟನ್ನು ಸಿಂಗಲ್‌ಸೆಸ್ ಪಾಯಿಂಟ್ ಮಾಡುವುದರೊಳಗೆ, ಕ್ರಾಪ್ ಸೀಸನ್ ಅನ್ನುವುದು ಬಹಳಷ್ಟು ತೊಂದರೆಯನ್ನು ಮಾಡುತ್ತಿದೆ. ಅದರ ದುರುಪಯೋಗ ಸಹ ನಡೆಯುತ್ತಿದೆ. ಆ ತೊಂದರೆ ವರ್ತಕ ಸಮುದಾಯಕ್ಕೆ ಆಗಬಾರದು. ವ್ಯವಸ್ಥೆ ಬಹಳ ಪಾರದರ್ಶಕವಾಗಿ ಪ್ರಾಮಾಣಿಕವಾಗಿ ನಡೆಯಬೇಕೆಂದು ಅವೊಂದು ದೃಷ್ಟಿಯಿಂದ ಅದನ್ನು ಪೀರಿಯೆಡ್ ಅಂತ ತಂದು ತಾವೇನು ಈ ಕ್ರಮ ಕೈಗೊಳ್ಳುತ್ತಾ ಇದ್ದೀರಿ ಇದು ಬಹಳಷ್ಟು ಶ್ಲಾಘನೀಯವಾದ ಕ್ರಮ. ದಯವಿಟ್ಟು ಇದನ್ನು ತಾವು ಕೂಡಲೇ ಮಾಡಬೇಕನ್ನುವ ಮಾತನ್ನು ಹೇಳಿ, ಮಾನ್ಯ ಎಸ್.ಎಸ್. ಪಾಟೀಲರ ಸಲಹೆಯನ್ನು ಸ್ವಾಗತ ಮಾಡುತ್ತೇನೆ.ಇಲ್ಲಿ ಅಧಿಕಾರ ವಿಕೇಂದ್ರೀಕರಣ ಸಂಪೂರ್ಣವಾಗಿ ಆಗಬೇಕಾಗಿದೆ. ತಾವು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮಪಂಚಾಯಿತಿ ವ್ಯವಸ್ಥೆಯೊಳಗೆ ಸರ್ಕಾರ ಕೊಡುವಂತಹ ಅನುದಾನವನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಅವರಿಗೆ ಸಂಪೂರ್ಣ ಅಧಿಕಾರವನ್ನು ನಾವು ಕೊಟ್ಟಿದ್ದೇವೆ. ಇಲ್ಲಿ ಎಪಿಎಂಸಿಯೊಳಗೆ ಸರ್ಕಾರದ ಹಣ ಇರುವುದೇ ಇಲ್ಲ. ಎಪಿಎಂಸಿ ಆ ಹಣವನ್ನು ಶೇಖರಣೆ ಮಾಡುತ್ತದೆ. ರೈತರಿಂದ, ವರ್ತಕರಿಂದ ಹಣ ಶೇಖರಣೆ ಮಾಡಿದ್ದನ್ನು ಖರ್ಚುಮಾಡಲಿಕ್ಕೆ ನಾವೆಲ್ಲಾ ಬೆಂಗಳೂರು ಮಟ್ಟಕ್ಕೆ ಬರುವಂತಹ ಪ್ರಸಂಗ ಇರುವುದರಿಂದ ಅಧಿಕಾರ ವಿಕೇಂದ್ರೀಕರಣವಾಗಲೇಬೇಕು. ಈಗಾಗಲೇ ನಾವು ಆ ಬಗ್ಗೆ ಪಕ್ಷದೊಳಗೆ ಸಚಿವರ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಸಚಿವರು ಅದಕ್ಕೆ ಒಪ್ಪಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಅದಕ್ಕೆ ಒಪ್ಪಿದ್ದಾರೆ. ಅಧಿಕಾರ ವಿಕೇಂದ್ರೀಕರಣ ತರಲಿಕ್ಕೆ ಮುಂದಿನ ಅಧಿವೇಶನದೊಳಗೆ ಆ ಬಿಲ್ಲನ್ನು ತರುತ್ತೇವೆಂದು ಮಾರುಕಟ್ಟೆ ಸಚಿವರಾದ ಬಿ.ಎಸ್.ಪಾಟೀಲರು ನಮಗೆ ಭರವಸೆಯನ್ನು ಕೊಟ್ಟಿದ್ದಾರೆ. ಕೊಟ್ಟ ಮಾತನ್ನು ಉಳಿಸಿಕೊಂಡು ಮುಂದಿನ ಸಾರಿ ಅದನ್ನು ಮಾಡುತ್ತಾರೆ. ಸುಗ್ರೀವಾಜ್ಞೆಯನ್ನು ತರುವಂತಹ ಅವಶ್ಯಕತೆಯಿಲ್ಲ. ಮುಂದಿನ ಅಧಿವೇಶನದೊಳಗೆ ಮಾಡುತ್ತೇವೆ. ನಿಮ್ಮ ಕಡೆ ಅಧಿಕಾರವಿದ್ದಾಗ ಗೌಡರೇ, ಆಗ ನೀವೇನು ಬದಲಾವಣೆ ತರಲಿಲ್ಲ. ತರಬಹುದಿತ್ತು. ಐದು ವರ್ಷ ಅಧಿಕಾರವನ್ನು ಕಳೆದಿರಿ. ಆಗಲೂ ಇದೆ ಸೆಂಟ್ರಲೈಸ್ಡ್ ವ್ಯವಸ್ಥೆಯಿತ್ತು. ನಾವು ತರುತ್ತೇವೆನ್ನುವ ಭರವಸೆಯನ್ನು ಕೊಡುತ್ತೇವೆ ತರುತ್ತೇವೆ. ದಯವಿಟ್ಟು ತಾವು ಇದನ್ನು ಅಪ್ರೀಷಿಯೇಟ್ ಮಾಡಬೇಕು. ನಿಮ್ಮ ಸೂಚನೆ ಶ್ಲಾಘನೀಯವಿದೆ. ಅದನ್ನು ಬೇಗ ಕಾರ್ಯಗತ ಮಾಡುತ್ತೇವೆನ್ನುವ ಭರವಸೆಯನ್ನು ಕೊಡುತ್ತೇವೆ. ಏಕೆಂದರೆ ಒಳ್ಳೆಯ ನಿಮ್ಮ ಸಲಹೆ ಏನು ಇರುತ್ತದೆ ಅದನ್ನು ನಿಮ್ಮ ಪಕ್ಷದ ಚೌಕಟ್ಟಿನೊಳಗೆ ಇಂಪ್ಲಿಮೆಂಟ್ ಮಾಡಲಿಕ್ಕೆ ತೊಂದರೆಯಾಗುತ್ತದೆ ಎನ್ನುವುದು ನಮಗೆ ಅನುಭವವಿದೆ. ನಮ್ಮ ಪಕ್ಷದೊಳಗೆ ಹಾಗೆ ಇಲ್ಲ. ಒಳ್ಳೆಯ ಸಲಹೆ ಬಂದಿದ್ದನ್ನು ನಾವು ಕಾರ್ಯಗತ ಮಾಡುತ್ತೇವೆ. ಜನಪರವಾದ ಸಲಹೆಗಳು ಯಾವುದೇ ಇರಲಿ ಅವುಗಳನ್ನು ಇಂಪ್ಲಿಮೆಂಟ್ ಮಾಡುವುದು ಬಹುತೇಕ ಕಾಂಗ್ರೆಸ್ ಸರ್ಕಾರ ಇದ್ದಾಗ ಎನ್ನುವ ನಂಬಿಗೆಯನ್ನು ತಾವೇನು ವ್ಯಕ್ತ ಮಾಡಿದ್ದೀರಲ್ಲ, ಆ ನಂಬಿಗೆ ಹುಸಿಯಾಗಲಾರದಹಾಗೆ ನಾವು ಕೆಲಸ ಮಾಡುತ್ತೇವೆ ಎನ್ನುವ ಭರವಸೆಯನ್ನು ತಮಗೆ ಕೊಡುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್(ತಿಕೋಟ):- ಮಾನ್ಯ ಅಧ್ಯಕ್ಷರೆ, ಒಂದು ಕ್ಲಾರಿಫಿಕೇಶನ್, ಈ ಮಸೂದೆಯನ್ನು ನಾನೂ ಕೂಡ ಸ್ವಾಗತ ಮಾಡುತ್ತಾ, ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದು ಇಷ್ಟೆ, ಇದರಲ್ಲಿ ಇನ್ನೊಂದು ಲೋಪದೋಷವಾಗುತ್ತದೆ. ಪ್ರಾಯಶಃ ಅವರ ಗಮನಕ್ಕೆ ಬಂದಿರಬಹುದು. ಬಿಜಾಪುರದ ಎಪಿಎಂಸಿಯಲ್ಲಿ ಅದು ಆಗಿದೆ. ಯಾರು ಕೃಷಿಕರು ಇರುತ್ತಾರೆ ಅವರು ವಿಶೇಷವಾಗಿ ಬೋರ್ಡ್‌ಗೆ ಸೆಲೆಕ್ಟ್ ಆಗಿ ಬರುತ್ತಾರೆ. ವರ್ತಕರು ಎಂದು ಇರಬಾರದೆಂದು ಇದೆ. ಮಾನ್ಯ ಡಿ.ಆರ್. ಪಾಟೀಲರೇ ಇದನ್ನು ನೀವು ಒಪ್ಪುತ್ತೀರಿ. ಆದರೆ ವರ್ತಕರು ಇದ್ದವರು ಏನು ಮಾಡುತ್ತಾರೆಂದರೆ, ಚುನಾವಣೆಗೆ ವರ್ಷ ಅಥವಾ ಆರು ತಿಂಗಳು ಮೊದಲು ತಮ್ಮ ಲೈಸೆನ್ಸ್ ರದ್ದು ಮಾಡಿಕೊಳ್ಳುತ್ತಾರೆ. ಹಾಗೆ ಮಾಡಿಕೊಂಡು ಅವರೇ ಎಪಿಎಂಸಿ ಡೈರೆಕ್ಟರ್ ಆಗುತ್ತಾರೆ. ಅಂತಹ ಸದಸ್ಯರನ್ನು ಕಡಿಮೆ ಮಾಡತಕ್ಕ ಅಧಿಕಾರ ಎಪಿಎಂಸಿ ಡೈರೆಕ್ಟರ್‌ಗೆ ಇದೆ. ಆ ಅಧಿಕಾರದ ಅಪೀಲ್ ಡೈರೆಕ್ಟರ್‌ಗೆ ಹಾಕಿದರೆ, ಇದರ ಬಗ್ಗೆ ಪ್ರಾಯಶಃ ಸಚಿವರು ಉತ್ತರ ಕೊಡುತ್ತಾರೆಂದು ನನಗನಿಸುತ್ತದೆ. ಮೂರು ತಿಂಗಳಿನಿಂದ ಅಪೀಲನ್ನು ಅವರು ಹಿಯರಿಂಗ್ ಮಾಡಲಿಕ್ಕೆ ತಯಾರಿಲ್ಲ. ಯಾರು ಮೋಸ ಮಾಡಿ ಬಂದಿದ್ದಾರೆ. ಅವರು ತಪ್ಪು ಮಾಡಿದ್ದಾರೆಂದು ಬೇರೆಯವರು ಹೈಕೋರ್ಟ್‌ಗೆ ಹೋದರೆ ಹೈಕೋರ್ಟ್ ಹೇಳುತ್ತದೆ ಇದು ನಮ್ಮ ಜ್ಯೂರಿಸ್‌ಡಿಕ್ಷನ್‌ನಲ್ಲಿ ಬರುವುದಿಲ್ಲ. ನೀವು ಮಾರ್ಕೆಂಟಿಗ್ ಡೈರೆಕ್ಟರ್ ಕಡೆಗೆ ಅಪೀಲ್ ಹೋಗಿ ಎಂದು ಹೇಳುತ್ತಾರೆ. ಆದರೆ ಡೈರೆಕ್ಟರ್ ಯಾವುದೇ ತಪ್ಪು ಲೋಪದೋಷವಾಗಿದ್ದನ್ನು ಒಂದು ಇತಿಮಿತಿ ಅಥವಾ ಕಾಲಾವಕಾಶದೊಳಗೆ ಡಿಸ್‌ಪೋಸ್ ಮಾಡಬೇಕೆನ್ನತಕ್ಕದ್ದು ಒಂದು ಕಡ್ಡಾಯವಾಗಿ ರೂಲ್ಸ್ ಇರಬೇಕಾಗುತ್ತದೆ. ಮಾನ್ಯ ಸಚಿವರ ಕ್ಷೇತ್ರದ ಎಪಿಎಂಸಿಯಲ್ಲಿ ಇದು ಆಗಿದೆ. ಇಬ್ಬರು ವರ್ತಕರು ಇದ್ದವರು ಕೃಷಿಕರಾಗಿ ಇವತ್ತು ಬೋರ್ಡ್‌ನ ಸದಸ್ಯರಾಗಿ ಬಂದಿದ್ದಾರೆ. ಅದನ್ನು ಯಾವಾಗ ಡಿಸ್ ಪೋಸ್ ಅಪ್ ಮಾಡುತ್ತಾರೆ ಅದನ್ನು ಕಡ್ಡಾಯವಾಗಿ ಮಾಡಬೇಕೆಂದು ತಾವು ಒಂದು ಕಾನೂನನ್ನು ಜಾರಿಗೆ ತರುತ್ತೀರಾ? ಅದರ ಬಗ್ಗೆ ಮಾನ್ಯಸಚಿವರು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಬಿ.ಆರ್. ಯಾವಗಲ್(ನರಗುಂದ):- ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಅವಕಾಶ ಕೊಡಿ. ಕೆಲವೊಂದು ತಿದ್ದುಪಡಿ ಮಸೂದೆಯನ್ನು ಸ್ವಾಗತ ಮಾಡಲೇಬೇಕು. ಸಾಮಾಜಿಕ ನ್ಯಾಯದ ಚೌಕಟ್ಟಿನಲ್ಲಿ ಇದನ್ನು ಮಾಡಲಾಗಿದೆ. ಇದೇನು ಕಾಯಿದೆ ಇದೆ ಮತ್ತು ವ್ಯವಸ್ಥೆಯಿದೆ ಇದರಲ್ಲಿ ಅಧಿಕಾರಿಗಳ ಹಿಡಿತ ಬಹಳ ಗಟ್ಟಿಯಾಗಿದೆ. ಚುನಾಯಿತ ಪ್ರತಿನಿಧಿಗಳ ಸಂಸ್ಥೆಗಳಿಗಿಂತ ಸೆಕ್ರೆಟರಿ, ಅವರ ಮೇಲಿನ ಅಧಿಕಾರಿಗಳು, ಡೈರೆಕ್ಟರ್, ಮಾನ್ಯ ಮಂತ್ರಿಗಳು ಇವರ ಹಿಡಿತ ಬಹಳ ಜೋರಾಗಿದೆ. ಬಹಳ ಗಟ್ಟಿಯಾಗಿದೆ. ಅಂದರೆ ಆ ಹಿಡಿತವನ್ನು ಬಿಟ್ಟು ಹೊರಗೆ ಹೋಗಲಿಕ್ಕೆ ಸಾಧ್ಯವಿಲ್ಲವೆನ್ನುವ ಮಟ್ಟಕ್ಕೆ ಇದೆ. ಎಪಿಎಂಸಿಯ ಚುನಾಯಿತ ಸಂಸ್ಥೆಗಳು ಏನಿವೆ ಆ ಎಲ್ಲಾ ಸಮಿತಿಗಳಿಂಗಿಂತ, ಸೆಕ್ರೆಟರಿ ಹೆಚ್ಚು ಶಕ್ತಿಯುತನಾಗಿದ್ದಾನೆ. ಅವನು ಬೇಡವೆಂದರೆ ಅಲ್ಲಿ ಏನೂ ಆಗಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಎಸ್.ಎಸ್ ಪಾಟೀಲರು ಹೇಳಿದಹಾಗೆ ಇದು ಅಧಿಕಾರ ವಿಕೇಂದ್ರೀಕರಣವಾಗಬೇಕು. ಅವರ ಕಾಲದಲ್ಲಿ ಮಾಡಬೇಕಾಗಿತ್ತೆಂದು ಹೇಳಿದರು ಅದನ್ನು ನಾನು ಒಪ್ಪುತ್ತೇನೆ. ಅಧಿಕಾರ ಬಿಟ್ಟು ಕೊಡಲಿಕ್ಕೆ ಸ್ವಲ್ಪ ಕಷ್ಟ. ಅಧಿಕಾರ ವಿಕೇಂದ್ರೀಕರಣವಾದರೆ ಅಧಿಕಾರ ಬಿಟ್ಟು ಕೊಡಬೇಕು. ಅದನ್ನು ಮಾಡುವುದು ಕಷ್ಟ. ಮಾನ್ಯ ಮಂತ್ರಿಗಳು ಬಹಳ ಧಾರಳವಾಗಿದ್ದಾರೆ. ಒಳ್ಳೆಯ ಸಜ್ಜನ ಮಂತ್ರಿಗಳಿದ್ದಾರೆ. ಇದರ ಬಗ್ಗೆ ಗಂಭೀರವಾದ ಚಿಂತನೆಯನ್ನು ಮಾಡಬೇಕು.

ಲ್ಲದಿದ್ದರೆ ಇದಕ್ಕೆ ಏನೂ ಉಪಯುಕ್ತತೆ ಇಲ್ಲ; ಎ.ಪಿ.ಎಂ.ಸಿ. ಗಳಿಂದ ಏನೂ ಪ್ರಯೋಜನ ಇಲ್ಲ. ಪ್ರತಿಯೊಂದು ಠರಾವನ್ನು ಮಾನ್ಯತೆ ಮಾಡದೇ ಇದ್ದರೆ ಏನೂ ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಗಂಭೀರವಾಗಿ ಚಿಂತನೆಯನ್ನು ಮಾನ್ಯ ಮಂತ್ರಿಗಳು ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಕಾನೂನು ಸಚಿವರಿಗೆ ಒಂದೇ ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ. ಈಗ ನಾವು ಸೆಕ್ಷನ್ 11ಕ್ಕೆ ಏನು ತಿದ್ದುಪಡಿಯನ್ನು ತಂದಿದ್ದೇವೆ ಎಂದರೆ, ಒಂದು ಪಕ್ಷ ಏನಾದರೂ ಎಸ್.ಸಿ. ಇಲ್ಲದೇ ಹೋದರೆ, ಅಲ್ಲಿ ಬೇಕಾದರೆ ಎಸ್.ಟಿ. ಕಾಂಟೆಸ್ಟ್ ಮಾಡಬಹುದು. ಎಸ್.ಟಿ. ಇಲ್ಲದೇ ಹೋದರೆ, ಅಲ್ಲಿ ಬೇಕಾದರೆ ಎಸ್.ಸಿ ಕಾಂಟೆಸ್ಟ್ ಮಾಡಬಹುದು. ಆ ಮೇಲೆ ಏನಾದರೂ 'ಎ' ಗ್ರೂಪ್‌ನವರು ಇಲ್ಲದೇಹೋದರೆ ' ಬಿ', ಗ್ರೂಪ್‌ನವರು ಕಾಂಟೆಸ್ಟ್ ಮಾಡಬಹುದು. 'ಬಿ' ಗ್ರೂಪ್‌ನವರು ಇಲ್ಲದೇ ಹೋದರೆ 'ಎ' ಗ್ರೂಪ್‌ನವರು ಕಾಂಟೆಸ್ಟ್ ಮಾಡಬಹುದು ಎಂದು ಒಂದು ತಿದ್ದುಪಡಿಯನ್ನು ಸೆಕ್ಷನ್ 11ರಲ್ಲಿ ತಂದಿದ್ದೇವೆ. ಇದು ಬಹಳ ಸ್ವಾಗತಾರ್ಹವಾದದ್ದು. ಆಮೇಲೆ ಸೆಕ್ಷನ್ 15ಕ್ಕೆ ಏನು ತಿದ್ದುಪಡಿಯನ್ನು ತಂದಿದ್ದೇವೆ ಎಂದರೆ ಅದನ್ನು ಓದಿಬಿಡುತ್ತೇನೆ.

"ಪರಂತು, ಒಬ್ಬ ವ್ಯಕ್ತಿಯು ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳು ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಅಥವಾ ಮಹಿಳೆಯರಿಗಾಗಿ ಮೀಸಲಿಡಲಾದ ಕೃಷಿಕರ ಚುನಾವಣಾ ಕ್ಷೇತ್ರಗಳಿಂದ ಚುನಾಯಿತನಾಗುವುದಕ್ಕೆ, ಅಂಥ ವ್ಯಕ್ತಿಯು, ಆ ಜಾತಿಗಳಿಗೆ, ಪಂಗಡಗಳಿಗೆ ಅಥವಾ ವರ್ಗಗಳಿಗೆ ಸೇರಿದವನಾಗಿದ್ದ ಹೊರತು ಅಥವಾ ಮಹಿಳೆಯಾಗಿದ್ದ ಹೊರತು, ಅರ್ಹನಾಗಿರತಕ್ಕದ್ದಲ್ಲ."

ಅಂತ ಇಲ್ಲಿ ಹೇಳುತ್ತೇವೆ. ಅಂದರೆ ಈಗ ಎಸ್.ಸಿ ಕ್ಷೇತ್ರದಿಂದ ನಿಂತುಕೊಳ್ಳಬೇಕಾದರೆ ಅವನು ಎಸ್.ಸಿ.ನೇ ಆಗಿರಬೇಕು. ಎಸ್.ಟಿ. ಕ್ಷೇತ್ರದಿಂದ ನಿಂತುಕೊಳ್ಳಬೇಕಾದರೆ ಅವನು ಎಸ್.ಟಿ.ಯೇ ಆಗಿರಬೇಕು. ಅದು ಈ ಸೆಕ್ಷನ್‌ನಲ್ಲಿ ಹೇಳತಕ್ಕಂಥಾದ್ದು. ಈಗ ಸೆಕ್ಷನ್ 11ರಲ್ಲಿ ಏನು ಹೇಳುತ್ತೇವೆ ಎಂದರೆ ಎಸ್.ಸಿ. ಇಲ್ಲದೇ ಹೋದರೆ ಅಲ್ಲಿ ಬೇಕಾದರೆ ಎಸ್.ಟಿ. ಕಾಂಟೆಸ್ಟ್ ಮಾಡಬಹುದು. ಎಸ್.ಟಿ. ಇಲ್ಲದೇ ಹೋದರೆ, ಅಲ್ಲಿ ಬೇಕಾದರೆ ಎಸ್.ಸಿ. ಕಾಂಟೆಸ್ಟ್ ಮಾಡಬಹುದು. ಹಾಗೆ 'ಎ' ವರ್ಗದವನು ಇಲ್ಲದೇ ಹೋದರೆ ಬಿ.ಯವನು ಕಾಂಟೆಸ್ಟ್ ಮಾಡಬಹುದು. 'ಬಿ' ಕ್ಯಾಟಗರಿಯವರು ಇಲ್ಲದೇ ಹೋದರೆ 'ಎ' ಕ್ಯಾಟಗರಿಯವರು ಕಾಂಟೆಸ್ಟ್ ಮಾಡಬಹುದು ಎಂದು ಅಲ್ಲಿ ಹೇಳುತ್ತೀರಿ. ಇಲ್ಲಿ ಏನು ಹೇಳುತ್ತಿದ್ದೀರಿ ಎಂದರೆ ಆಯಾಯ ಜಾತಿಯಿಂದ ಇದ್ದರೆ ಮಾತ್ರ ಅವನು ಆ ಕ್ಷೇತ್ರಕ್ಕೆ ಕಾಂಟೆಸ್ಟ್ ಮಾಡಬಹುದು ಎಂದು ಇದೆ ಆದರೆ ಈ ಎರಡು ಸೆಕ್ಷನ್‌ಗಳು ಕಾಂಟ್ರಾಡಿಕ್ಟರಿ ಎಂಬುದು ನನ್ನ ಅಭಿಪ್ರಾಯ. The Law Department is the right department to come to our rescue and they must enlighten us. ಆದ್ದರಿಂದ ಮಾನ್ಯ ಕಾನೂನು ಸಚಿವರು ಈ ಎರಡೂ ಸೆಕ್ಷನ್‌ಗಳಲ್ಲಿ ಇರತಕ್ಕಂಥ ಕಾಂಟ್ರಾಡಿಕ್ಷನ್ ಏನಿದೆ ಅದರ ಬಗ್ಗೆ ಸ್ವಲ್ಪ ಕ್ಲಾರಿಫಿಕೇಶನ್ ಮಾಡಬೇಕು.

ಶ್ರೀ ಎನ್. ಯೋಗೀಶ್‌ಭಟ್(ಮಂಗಳೂರು):- ಮಾನ್ಯ ಅಧ್ಯಕ್ಷರೇ, ಈ ಕಾಯದೆಯಲ್ಲಿ ಸ್ವಾಗತಾರ್ಹ ಅಂಶಗಳು ಇದ್ದರೂ ಕೂಡ ಇದರ ಜೊತೆಯಲ್ಲಿ ನನ್ನದು ಒಂದೇ ಒಂದು ಸಲಹೆ, ನಾನು ಮಂಗಳೂರು ಕುರಿತಾಗಿ ಹೇಳುವಂಥಾದ್ದು, ಮಾರುಕಟ್ಟೆಗಳನ್ನು ನಿರ್ಮಿಸುವಂಥ ಈ

ಸಂದರ್ಭದಲ್ಲಿ ವಿಶೇಷವಾಗಿ ಹಳೆಯ ಬಂದರು ಪ್ರದೇಶದಲ್ಲಿ ಇರುವ ಮಾರುಕಟ್ಟೆಯನ್ನು ಉಳಿಸಿ ಹೊಸ ಮಾರುಕಟ್ಟೆಯನ್ನು ಬೆಳೆಸುವಂಥ ನಿಟ್ಟಿನಲ್ಲಿ ಇನ್ಸೆಂಟೀವ್ ಕೊಡುವಂಥ ರೀತಿಯಲ್ಲಿ ತಾವು ಯೋಚನೆ ಮಾಡಿದಲ್ಲಿ ಬಹಳ ಅನುಕೂಲವಾಗುತ್ತದೆ. ಯಾವುದೇ ಕಾರಣಕ್ಕೆ ಫೋರ್ಸ್ ಮಾಡುವುದು ಸರಿಯಲ್ಲವೆಂದು ಹೇಳುವಂಥ ಮನವಿಯನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ನಾನು ಬಯಸುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:– ಈ ಅಂಬಿಗ್ಯುಯಿಟಿ ಇದೆಯಲ್ಲಾ, ಇದರ ಬಗ್ಗೆ ಕ್ಲಾರಿಫಿಕೇಶನ್ ಬೇಕು. ಏಕೆಂದರೆ - Why I am taking precaution is tomorrow we should not drive the people to Court. ಇದೊಂದೇ ಆಧಾರದ ಮೇಲೆ ನೀವು ಒಂದುಕಡೆ ಎಸ್‌ಸಿ:ಎಸ್‌ಟಿ ಯಾರು ಬೇಕಾದರೂ ನಿಂತುಕೊಳ್ಳಬಹುದು ಎಂದು ಹೇಳುತ್ತೀರಿ. ಇನ್ನೊಂದು ಕಡೆ ಅವರೇ ನಿಂತುಕೊಳ್ಳಬೇಕೆಂದು ಹೇಳುತ್ತೀರಿ. ಇದಕ್ಕೆ ಕ್ಲಾರಿಫಿಕೇಶನ್ ನೀಡಬೇಕೆಂದು ಹೇಳುತ್ತೇನೆ. ಇದು ನಿರ್ದಿಷ್ಟವಾಗಿ ಇರಬೇಕು. ಇಲ್ಲದೇ ಹೋದರೆ ನಾಳೆ ಇದರಲ್ಲಿ, ಕೋಪರೇಟೀವ್ ಸೆಕ್ಟಾರ್‌ನಲ್ಲಿ ಬಹಳ ಬೇಗ ಕೋರ್ಟಿಗೆ ಹೋಗುತ್ತಾರೆ. ಇಂಥಾದ್ದು ಆಗಬಾರದು ಎಂದು ನನ್ನ ಉದ್ದೇಶ.

ಶ್ರೀ ಬಿ.ಎಸ್. ಪಾಟೀಲ್‌ಸಾಸನೂರ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇದು ಸಂವಿಧಾನದಲ್ಲಿ ಸಮಸ್ಯೆ ಬಂದರೆ ರಿಸರ್ವೇಶನ್ ಏನು ಮಾಡಿದ್ದೇವೆ, ಅದನ್ನು ಹೇಗೆ ಮಾಡುತ್ತೇವೆ ಎನ್ನುವಂಥಾದ್ದು. ನಾವು ಇದನ್ನು ಮಾಡಬೇಕಾದರೆ, ಕಾನೂನನ್ನು ತರಬೇಕಾದರೆ ಕಾನೂನು ಇಲಾಖೆಯಿಂದ ಸಲಹೆ-ಸೂಚನೆಗಳನ್ನು ಪಡೆದುಕೊಂಡು ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಮುಂದೆ ಆ ರೀತಿ ಏನಾದರೂ ಬಂದರೆ ಮತ್ತೆ ಅದಕ್ಕೆ ಪರ್ಯಾಯ ವಿಚಾರವನ್ನೂ ಕೂಡ ಮಾಡುವಂಥ ವ್ಯವಸ್ಥೆಯನ್ನು ಮಾಡೋಣ. ಅವರು ಇನ್ನೊಂದು ಕೇಳಿದರು. ಒಂದು ವರ್ಷ ಅವಧಿ ಹೆಚ್ಚು ಏಕೆ ಮಾಡಿದ್ದೀರಿ, ಅವರು ಕೋರ್ಟಿಗೆ ಹೋಗಲಿಕ್ಕೆ ಏನು ಕಾರಣವಿತ್ತು ಎನ್ನುವಂಥಾದ್ದು. ನನಗೆ ತಿಳಿದಹಾಗೆ ನಾವು ಕಾನೂನಿನಲ್ಲಿ ಎಲ್ಲಾ ಸರಿಯಾಗಿದೆ. ಎನ್ನುವ ದೃಷ್ಟಿಯಿಂದ ಮಾಡುತ್ತೇವೆ. ಆದರೆ ನಮ್ಮಲ್ಲಿ ಹಳ್ಳಿಯ ಭಾಷೆಯಲ್ಲಿ ಒಂದು ಗಾದೆ ಮಾತಿದೆ. ದಿಟ್ಟಿಸಿ ನೋಡಿದರೆ ಮನೆಯ ಹೆಂಡತಿ ಗುಡ್ಡ ಅಂತ. ಹಾಗೆ ಕಾನೂನಿನಲ್ಲಿ ಏನಾದರೂ ಒಂದು ಲೋಪದೋಷವನ್ನು ಹುಡುಕಾಡುವ ನಿಟ್ಟಿನಲ್ಲಿ ಕೆಲವು ಜನ ಇದರಲ್ಲಿ ತಜ್ಞರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಕೆಲವು ಜನ ಕೋರ್ಟಿಗೆ ಹೋಗಿ ಅಲ್ಲಿ ಒಂದು ವರ್ಷವರೆಗೆ ಕಾಯ್ದಿದ್ದರಿಂದ ನಾವು ಈ ತಿದ್ದುಪಡಿಯನ್ನು ತರುವಂಥ ಅವಶ್ಯಕತೆ ಬಿದ್ದಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ತಾವು ಕ್ರಾಪ್ ಸೀಸನ್‌ನಲ್ಲಿ ಪೀರಿಯಡ್ ಮಾಡಿರುವುದಕ್ಕೆ ವಿವರಣೆಯನ್ನು ಕೇಳಿದ್ದೀರಿ. ಕ್ರಾಪ್ ಸೀಸನ್ ಎನ್ನುವಂಥಾದ್ದು ಮೂರು. ಬೇಸಿಗೆ ಬೆಳೆ, ಮುಂಗಾರು ಬೆಳೆ ಮತ್ತು ಹಿಂಗಾರು ಬೆಳೆ ಎಂದು ಇರುವುದರಿಂದ ಈ ಅವಧಿಯನ್ನು ಮಾಡುವುದರಿಂದ, ಮತ್ತು 12 ತಿಂಗಳು ನಾವು ಮಾರಾಟದ ವ್ಯವಸ್ಥೆಯನ್ನು ಇರುವುದರಿಂದ ಹಾಗೂ ಈ ಕ್ರಾಪ್ ಸೀಸನ್ ಮಾಡುವುದರಿಂದ ಹೆಚ್ಚು ಕನ್‌ಫ್ಯೂಶನ್ ಆಗುತ್ತದೆ ಎನ್ನುವ ಕಾರಣಕ್ಕೆ ನಾವು 'ಪೀರಿಯಡ್' ಎಂದು ಮಾಡಿಕೊಂಡು ಒಂದು ವರ್ಷವರೆಗೆ ಈ ಪೀರಿಯಡ್‌ನ್ನು ವಿಸ್ತರಿಸುವ ಒಂದು ನಿಯಮವನ್ನು ನಾವು ಹಾಕಿಕೊಂಡಿದ್ದೇವೆ. ಅದಕ್ಕಾಗಿ ಈ ಕ್ರಾಪ್ ಸೀಸನ್‌ನಲ್ಲಿ 'ಪೀರಿಯಡ್' ಎನ್ನುವಂಥಾದ್ದು ನಾವು ತಿದ್ದುಪಡಿಯನ್ನು ತಂದಿದ್ದೇವೆ.

ಇದರ ಜೊತೆಗೆ ಮಾನ್ಯ ಸಿಂಧ್ಯಾರವರು, ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಎಸ್.ಎಸ್. ಪಾಟೀಲರು ರಸ್ತೆಗಳ ಬಗ್ಗೆ ಹೇಳಿದರು. ನಮ್ಮ ಸರ್ಕಾರ ಇದ್ದಾಗ ರಸ್ತೆಗಳ ಸಲುವಾಗಿ ನಾವು ಬಹಳಷ್ಟು ಹಣ ಕೊಡುತ್ತಿದ್ದೆವು. ನೀವು ಅದನ್ನು ತೆಗೆದುಹಾಕಿದ್ದೀರಿ ಎಂದು ಹೇಳಿದರು. ನಾನು ಎಲ್ಲ ಮಾನ್ಯ ಗೌರವಾನ್ವಿತ ಸದಸ್ಯರ ಗಮನಕ್ಕೆ ಒಂದು ವಿಚಾರವನ್ನು ತರುತ್ತಿದ್ದೇನೆ. ನಾವು ಅದನ್ನು ತೆಗೆದುಹಾಕಿಲ್ಲ. ಎಲ್ಲೆಲ್ಲಿ ಜಿಲ್ಲಾಪಂಚಾಯತ್ ರೋಡ್‌ಗಳು, ತಾಲ್ಲೂಕು ಪಂಚಾಯತಿ ರೋಡ್‌ಗಳು ಮತ್ತು ಪಿ.ಡಬ್ಲ್ಯೂ.ಡಿ ರೋಡ್‌ಗಳು ಎಲ್ಲಿ ಇಲ್ಲ. ಅಂತಹ ಕಡೆಯಲ್ಲಿ ಈ ಎ.ಪಿ.ಎಂ.ಸಿ.ಗಳ ಉತ್ಪನ್ನಕ್ಕೆ ಅನುಗುಣವಾಗಿ ಶೇಕಡಾ 30 ರಷ್ಟು ಹಣದಲ್ಲಿ ಈ ರಸ್ತೆಗಳ ನಿರ್ಮಾಣ ಮಾಡುವಂಥ ಒಂದು ಕಾನೂನು ವ್ಯವಸ್ಥೆ ಇದೆ. ಅದಕ್ಕಾಗಿ ಯಾವ ಮಾರುಕಟ್ಟೆಯ ಉತ್ಪನ್ನ ಜಾಸ್ತಿ ಇರುತ್ತದೆ.ಅದರಲ್ಲಿ ಶೇಕಡಾ 30 ರಷ್ಟು ಹಣವನ್ನು ರಸ್ತೆ ಸಲುವಾಗಿ ತೆಗೆದುಕೊಳ್ಳುವಂಥ ಕಾನೂನು ಇನ್ನೂ ಕೂಡ ಜಾರಿಯಲ್ಲಿದೆ ಎಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಎಸ್.ಎಸ್. ಪಾಟೀಲರು ಎಲ್ಲಾ ನಿಮ್ಮ ಅಧಿಕಾರವನ್ನು ಇಲ್ಲಿಯೇ ಇಟ್ಟುಕೊಂಡಿದ್ದೀರಿ. ನೀವು ಅಧಿಕಾರ ವಿಕೇಂದ್ರೀಕರಣ ಮಾಡುತ್ತಿಲ್ಲ. ನಮ್ಮ ರೈತ ಸಂಜೀವಿನಿ ಕೆಳಗೆ ಬಹಳ ಸಮಸ್ಯೆ ಆಗುತ್ತಿದೆ ಎಂದು ಹೇಳಿದರು. ನಾವು ನಮ್ಮ ಎಲ್ಲಾ ಅಧಿಕಾರವನ್ನು ಕೇಂದ್ರೀಕೃತ ಮಾಡಿಲ್ಲ. ಈ ಒಂದು 'ರೈತಸಂಜೀವಿನಿಯಲ್ಲಿ' ಯಾರಾದರೂ ಸತ್ತರೆ ಅವರಿಗೆ ಡಿವಿಜನ್ ಲೆವಲ್‌ನಲ್ಲಿ ನಮ್ಮ ಅಧಿಕಾರಿಗಳು ಇರುತ್ತಾರೆ. ಅವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಇನ್ನು ಅವಶ್ಯಕತೆ ಬಿದ್ದರೆ ಇನ್ನೂ ಹೆಚ್ಚಾಗಿ ಎ.ಪಿ.ಎಂ.ಸಿ. ಮಟ್ಟಕ್ಕೆ ಕೂಡ ಕೊಡುವ ನಿಟ್ಟಿನಲ್ಲಿ ನಾವು ಸರ್ಕಾರ ವಿಚಾರ ಮಾಡುವಂಥಾದ್ದನ್ನು ಮಾಡುತ್ತೇವೆ. ಮಾನ್ಯ ಪಿ.ಜಿ.ಆರ್. ಸಿಂಧ್ಯಾ ಹಾಗೂ ಮಾನ್ಯ ಸೋಮಶೇಖರ್ ಅವರು ಎಸ್‌ಸಿ:ಎಸ್‌ಟಿ ರಿಸರ್ವೇಶನ್ ಸಲುವಾಗಿ ಕೇಳಿದರು. ಎಸ್‌ಸಿ ಇಲ್ಲದೇ ಹೋದರೆ ಎಸ್.ಟಿ ಹಾಗೆಯೇ ಎಸ್.ಟಿ. ಇಲ್ಲದೇ ಹೋದರೆ ಎಸ್.ಸಿ.ಗೆ ಕೊಡುವಂಥಾದ್ದು. ಇದೊಂದು ರೀತಿಯಲ್ಲಿ ವೈಸ್‌ವರ್ಸಾ. ಅದನ್ನು ಮಾಡಿದ್ದೇವೆ. ಎಸ್.ಸಿ.ಗಳು ಎಲ್ಲಿಯಾದರೂ ಸಿಕ್ಕೇಸಿಗುತ್ತಾರೆ. ಎಸ್.ಸಿ ಇಲ್ಲದಿದ್ದರೆ ಅನ್ಯಾಯ ಆಗುತ್ತದೆ. ಎನ್ನುವಂಥ ಮಾತನ್ನೂ ಕೂಡ ತಾವು ಹೇಳಿದ್ದೀರಿ. ಸಧ್ಯಕ್ಕೆ ಎಸ್.ಸಿ.ಗಳು ಸಿಗದೇ ಇರುವಂಥ ಸ್ಥಳ ಯಾವುದೂ ಇರುವುದಿಲ್ಲ. ಎಸ್.ಸಿ. ಎಲ್ಲಿ ಇಲ್ಲ, ಅಲ್ಲಿ ಎಸ್.ಟಿ.ಗೆ ಕೊಡಬೇಕು. ಎಲ್ಲಿ ಎಸ್.ಟಿ. ಇಲ್ಲದಿದ್ದರೆ ಎಸ್.ಸಿ.ಗೆ ಕೊಡಬೇಕು ಎನ್ನುವಂಥ ಕಾನೂನಿನಲ್ಲಿ ಒಂದು ತಿದ್ದುಪಡಿಯನ್ನು ಕೂಡ ತಂದಿದ್ದೇವೆ. ಹಾಗೆಯೇ 'ಎ' ಗ್ರೂಪ್‌ನವರು ಇಲ್ಲದೇ ಹೋದರೆ ಬಿ ಗೆ ಕೊಡುತ್ತೇವೆ. ಎಲ್ಲಿ 'ಬಿ' ಗ್ರೂಪ್‌ನವರು ಇಲ್ಲ, ಅಲ್ಲಿ ನಾವು ಪುನಃ 'ಎ' ಗ್ರೂಪ್‌ನವರಿಗೆ ಕೊಡುತ್ತೇವೆ. ಹೀಗಾಗಿ 'ಎ' ಗ್ರೂಪ್‌ನವರಿಗೆ ನಾವು ರಿಸರ್ವೇಶನ್ ಕಾನೂನಿನಲ್ಲಿ ಮಾಡಿದ್ದೇವೆ. ಇದು ಐದು ಜನರಿಗೆ ಕೊಡಬೇಕು ಎನ್ನುವಂಥಾದ್ದು. ಒಂದು ಎಸ್‌ಸಿ, ಎಸ್‌ಟಿ, ಒಬ್ಬ ಮಹಿಳೆ, ಒಂದು 'ಎ' ಮತ್ತು ಒಂದು 'ಬಿ' ಆದರೆ ಎ ಮತ್ತು ಬಿ -ಎಸ್‌ಸಿ:ಎಸ್‌ಟಿಯಲ್ಲಿ ಸಿಗದೇ ಇದ್ದ ಪಕ್ಷದಲ್ಲಿ ಅವರಿಗೆ ಕೂಡ ನಾವು ಲ್ಯಾಪ್ಸ್ ಆಗಿಹೋಗಬಾರದು ಎನ್ನುವ ದೃಷ್ಟಿಯಿಂದ ಅಲ್ಲಿ, ಎಲ್ಲಿ ಎಸ್‌ಸಿ ಇಲ್ಲ, ಅಲ್ಲಿ ಎಸ್.ಟಿ.ಗೆ ಕೊಡುತ್ತೇವೆ. ಎಲ್ಲಿ ಎಸ್.ಟಿ. ಇಲ್ಲ ಅಲ್ಲಿ ಎಸ್.ಸಿ.ಗೆ ಕೊಡುತ್ತೇವೆ. ಅದೇ ರೀತಿ ಎ ಮತ್ತು ಬಿ - ಇದು ಕೂಡ ಆ ನಿಟ್ಟಿನಲ್ಲಿ ಮಾಡುವಂಥಾದ್ದು ಇದೆ.

ಶ್ರೀ ಬಿ. ಸೋಮಶೇಖರ್:– ಕೆಲವು ಕಡೆ 'ಎ' ಕ್ಯಾಟಗರಿ ಇರುತ್ತಾರೆ. ಆದರೆ 'ಎ' ಗೆ ಅಪ್ಲಿಕೇಶನ್ ಹಾಕಿಸುವುದೇ ಇಲ್ಲ. 'ಬಿ' ಗೆ ಹಾಕಿಸುತ್ತಾರೆ. ಇದೆಲ್ಲಾ ನಡೆಯುತ್ತದೆ. ಹಳ್ಳಿಗಳಲ್ಲಿ ಏನು ನಡೆಯುತ್ತದೆ ಎಂದು ತಮ್ಮ ಗಮನಕ್ಕೆ ಬಂದಿರುತ್ತದೆ.

ಶ್ರೀ ಬಿ.ಎಸ್. ಪಾಟೀಲ್‌ಸಾಸನೂರ:- ಅವರಿಗೆ ತಿಳುವಳಿಕೆ ಕೊಡುವ ಕೆಲಸ ಮಾಡಬೇಕು. ಆ ನಿಟ್ಟಿನಲ್ಲಿ ಕಾನೂನು ತರುವುದು ಸ್ವಲ್ಪ ಕಷ್ಟ ಇದೆ. ಅದಕ್ಕೆ ನಮ್ಮ ಡಿ.ಆರ್. ಪಾಟೀಲರು ಒಂದು ಸಲಹೆಯನ್ನು ಕೊಟ್ಟರು.....

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಸೋಮಶೇಖರ್ ಅವರಿಗೆ 'ಎ' ಅಥವಾ 'ಬಿ' ಬಗ್ಗೆ ಶಂಕೆ ಇದೆ. ಅದನ್ನು ಕ್ಲಾರಿಫೈ ಮಾಡಿ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ - No person falling under the category (A) is available, then only we go to (B) category. Therefore, there is no contradiction.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ):- ನನ್ನ ಕ್ಷೇತ್ರದಲ್ಲಿ ಉಡುಗೂರು ಎನ್ನುವಂಥ ಪಂಚಾಯತ್‌ನಲ್ಲಿ ಬಿ.ಸಿ.ಎ ಇದ್ದವರು ಅಪ್ಲಿಕೇಶನ್ ಹಾಕಲಿಲ್ಲ. ಅದನ್ನು ಜನರಲ್ ಅಂತ ಮಾಡಿದರು. ಒಬ್ಬ ಒಕ್ಕಲಿಗರನ್ನು ಅಲ್ಲಿ ಅಧ್ಯಕ್ಷರಾಗಿ ಮಾಡಿದರು. ನಾನು ಇದೇ ಸಭೆಯಲ್ಲಿ ಇದರ ಬಗ್ಗೆ ಹಿಂದೆ ಮಾತನಾಡಿದ್ದೇನೆ. ಇದು ಸ್ವಲ್ಪ ತೊಂದರೆಯಾಗುತ್ತಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ವೇಕೆಂಟ್ ಆಗಿ ಇಡಿ ಎಂದು ಹೇಳುವುದು ಸುಲಭ. ಆದರೆ ಮೂಲಭೂತವಾಗಿ ಶಾಸನದ ಉದ್ದೇಶ ಏನು? ಈ ಉದ್ದೇಶ ಈಡೇರಬೇಕೆಂದು ಹಿಂದುಳಿದ ವರ್ಗದವರಿಗೆ ಮೀಸಲಾತಿ ಕೊಡಬೇಕು, ಹರಿಜನ-ಗಿರಿಜನರಿಗೆ ಮೀಸಲಾತಿ ಕೊಡಬೇಕು. ಹರಿಜನ ಇಲ್ಲದಿದ್ದರೆ ಗಿರಿಜನ. ಗಿರಿಜನ ಇಲ್ಲದಿದ್ದರೆ ಹರಿಜನ. ನಾವು ಇಲ್ಲಿ ಏನೂ ಮಾಡಿದ್ದೇವೆ ಎಂದರೆ.....

ಶ್ರೀ ಕೆ. ಶ್ರೀನಿವಾಸಗೌಡ(ಕುದುವನಹಳ್ಳಿ):- ನನ್ನ ಸಲಹ ಏನೆಂದರೆ.....

Sri D.B. Chandregowda:- As A Law Minister, I would like to clarify.

ನಿಮಗೆ ಇರತಕ್ಕಂಥ ಶಂಕೆ ಎಂದರೆ ಇಲ್ಲಿ..... "Provided further that if no person falling under category 'A' is available....." Then only we will pass it on (B). If a person is available it shall go to him. ಕೆಲವು ಕ್ಷೇತ್ರಗಳಲ್ಲಿ ಹರಿಜನರಿಗೆ ಮೀಸಲಾತಿ ಇಲ್ಲದೆ ಈಗಲೂ ನಡೆಯುತ್ತಿದೆ. ಇದು ನಿಮಗೆ ಗೊತ್ತಾ?ಇದನ್ನು ಯಾರೂ ಪ್ರಶ್ನೆ ಮಾಡಿಲ್ಲ, ಅವು ನಡೆಯುತ್ತಿವೆ.

2.10 ಪಿ.ಎಂ.

ಎರಡನೇ ಪ್ರಶ್ನೆ ನಮ್ಮ ಮಾನ್ಯ ಮುದ್ದಹನುಮೇಗೌಡರು ಎತ್ತಿದ್ದು.....

ಶ್ರೀ ಕೆ. ಶ್ರೀನಿವಾಸಗೌಡ(ಕುದುವನಹಳ್ಳಿ):- ನನ್ನ ಸಲಹೆ ಏನೇಂದರೆ, ಅದನ್ನು ವೇಕೆಂಟ್ ಆಗಿ ಇಡಿ. ಇಲ್ಲದಿದ್ದರೆ ಏನು ಮಾಡುತ್ತಾರೆಂದರೆ ತಾವು ಎಲೆಕ್ಷನ್‌ಗೆ ಕರೆಯುತ್ತೀರಿ ಬೇಕು ಅಂತಲೇ ಅವಾಯ್ಡ್ ಮಾಡುತ್ತಾರೆ. ಆ ಕೇಟಗರಿಯ ಕ್ಯಾಂಡಿಡೇಟ್ಸ್ ಯಾರೂ ಬರಲಿಲ್ಲ ಅದಕ್ಕೆ ನಾವು ಎಲೆಕ್ಷನ್ ಮಾಡಿದೆವು ಎಂದು ಹೇಳುತ್ತಾರೆ. ಆದ್ದರಿಂದ ಎ,ಬಿ, ಅಥವಾ ಎಸ್.ಸಿ. ಎಸ್.ಟಿ ಕ್ಯಾಟಗರಿಯ ಅಭ್ಯರ್ಥಿಗಳು ಇಲ್ಲದಿದ್ದಾಗ ಅದನ್ನು ವೇಕೆಂಟ್ ಇಟ್ಟು ಪುನಃ ಚುನಾವಣೆ ನಡೆಸಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ:- ಆ ರೀತಿ ಮಾಡುತ್ತಾರೆಂದು ತಾವು ಎಚ್ಚರಿಕೆ ವಹಿಸಬೇಕು. ಎಚ್ಚರಿಕೆ ವಹಿಸದಿದ್ದರೆ ಆ ರೀತಿ ಆಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಾತಿ ಇಲ್ಲದೆ ಚುನಾವಣೆ ನಡೆಸಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ(ಕುದುವನಹಳ್ಳಿ):- ಆ ಲೆವೆಲ್‌ನಲ್ಲಿ ಆಗುವುದಿಲ್ಲ ಎನ್ನುವುದಕ್ಕೆ ಇದನ್ನು ಮಾಡಿ ಎಂದು ನಾನು ಹೇಳುವುದು. ಮತ್ತೆ ಎಲೆಕ್ಷನ್ ನಡೆಸಿ ತಪ್ಪೇನು ಆಗುತ್ತದೆ?

ಶ್ರೀ ಡಿ.ಬಿ. ಚಂದ್ರೇಗೌಡ:- ಇನ್ನೊಂದು ಪ್ರಶ್ನೆ ಏನೆಂದರೆ, Dichotomy; ಇದೆ. there is a contradiction. ಎಂದು ಹೇಳುತ್ತಾರೆ. ಸೆಕ್ಷನ್ 15ರಲ್ಲಿ ನಾವು ಕ್ಲಾರಿಫೈ ಮಾಡಿದ್ದೇವೆ; as to who should be the Scheduled Caste, who should be the Scheduled Tribes, who should be the Backward Class. Section 11 gives the authority or the opportunity for a member to contest. That is clarified in Section 15. It is only for that purpose.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಮಾನ್ಯ ಅಧ್ಯಕ್ಷರೇ, ಅದು ಯಾವ ಕೆಟಗರಿಯವರಿಗೆ ರಿಜರ್ವ್ ಆಗಿದೆಯೋ ಆ ಕೆಟಗರಿಯವರೇ ಕಾಂಟಸ್ಟ್ ಮಾಡಬೇಕೆಂದು ಹೇಳಲಾಗಿದೆ. ಸೆಕ್ಷನ್ 11ರಲ್ಲಿ (ಎ) ಕೆಟಗರಿಯವರು ಇಲ್ಲದಿದ್ದರೆ (ಬಿ) ಕೆಟಗರಿಯವರು ಕಾಂಟೆಸ್ಟ್ ಮಾಡಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ:- ಹೌದು.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು:- ಮಾನ್ಯ ಅಧ್ಯಕ್ಷರೇ, ಸೆಕ್ಷನ್ 11ರಲ್ಲಿ 5 ಜನರಿಗೆ ನಾವು ರಿಜರ್ವೇಷನ್ ಮಾಡಿದ್ದೇವೆ.

> " Provided that if no person belonging to the Scheduled castes is available, the seat reserved for that category shall also be filled by a person belonging to the Scheduled Tribes and vice versa."

ಸೆಕ್ಷನ್ 15 ಏನು ಹೇಳುತ್ತಿದೆ ಅಂದರೆ, ಎಲ್ಲಿ ನಾವು ರಿಜರ್ವೇಷನ್ ಮಾಡಿದ್ದೇವೆ 5 ಜನರಿಗೆ ಎಸ್.ಸಿ, ಎಸ್.ಟಿ, ಮಹಿಳೆ, ಬಿ.ಸಿ.ಎ, ಬಿ.ಸಿ.ಬಿ ಆ ರೀತಿ ರಿಜರ್ವೇಷನ್ ಮಾಡಿದಂತಹ ಸ್ಥಳಗಳಿಗೆ ಅವರು ಅಲ್ಲದವರು ಯಾವುದೇ ರೈತ ಅಲ್ಲಿ ಕಾಂಟಿಸ್ಟ್ ಮಾಡುವುದಕ್ಕೆ ಬರುವುದಿಲ್ಲ ಎನ್ನುವುದು ಸೆಕ್ಷನ್ 15. ಮಾನ್ಯ ಮುದ್ದಹನುಮೇಗೌಡರು ಏಕೆ ಕನ್‌ಫ್ಯೂಶನ್ ಮಾಡಿಕೊಂಡರೋ ನನಗೆ ಗೊತ್ತಿಲ್ಲ. ಈ ರಿಜರ್ವೇಷನ್ ಮಾಡಿದಂಥಾದ್ದಕ್ಕೆ ಯಾರು ಬೇಕಾದರೂ ಬೇಕಾದಲ್ಲಿ ಹೋಗಿ ಕಾಂಟೆಸ್ಟ್ ಮಾಡುವುದಕ್ಕೆ ಬರುವುದಿಲ್ಲ. ಸೆಕ್ಷನ್ 15ರ ಪ್ರಕಾರ ಯಾರ ಸಲುವಾಗಿ ನಾವು ರಿಜರ್ವೇಷನ್ ಮಾಡಿದ್ದೇವೆ ಅವರು ಮಾತ್ರ ಆ ಕ್ಷೇತ್ರಕ್ಕೆ ಸ್ಪರ್ಧೆ ಮಾಡಲಿಕ್ಕೆ ಅರ್ಹರೇ ಹೊರತು ಉಳಿದ ರೈತರು ಆ ಕ್ಷೇತ್ರದಲ್ಲಿ ಸ್ಪರ್ಧೆ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಕೆ. ಶ್ರೀನಿವಾಸಗೌಡ(ಕುದುವನಹಳ್ಳಿ):- ಮಾನ್ಯ ಅಧ್ಯಕ್ಷರೇ, ಟ್ರೇಡರ್ಸ್ ಅಧ್ಯಕ್ಷರಾಗಬಾರದು ಎಂದು ಈಗಿನ ಕಾಯ್ದೆಯಲ್ಲಿ, ಆಕ್ಟ್‌ನಲ್ಲಿದೆ. ಆಗ ನಿಮ್ಮಲ್ಲಿ ಆ ಕೆಟಗರಿಯವರು ಇಲ್ಲದಿದ್ದರೆ ಎ ಕೆಟಗರಿಯವರು, ಬಿ ಕೆಟಗರಿಯವರು, ಅಥವಾ ಎಸ್.ಸಿ.ಎಸ್.ಟಿ. ಕೆಟಗರಿಯವರು ಇಲ್ಲದಿದ್ದರೆ ಆಗ ಟ್ರೇಡರ್ ಏನಾದರೂ ಗೆದ್ದಿದ್ದಾರೆ ಆಗ ನೀವು ಏನಾದರೂ ಅವನನ್ನು ಅಧ್ಯಕ್ಷನನ್ನಾಗಿ ಮಾಡುತ್ತಿರೋ? ನಮ್ಮ ಸರ್ಕಾರವಿದ್ದಾಗ ಟ್ರೇಡರ್ ಅಧ್ಯಕ್ಷನಾಗಬಾರದು ಎಂದು ಒಂದು ಕಾನೂನು ಮಾಡಿದ್ದೇವೆ. ಆಗ ಏನಾದರೂ ಆ ರೀತಿ ಮಾಡುತ್ತೀರಾ? ಆ ಬಗ್ಗೆ ಕ್ಲಾರಿಫಿಕೇಶನ್ ಕೊಡುತ್ತೀರಾ?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ನಮ್ಮ ಮಾರುಕಟ್ಟೆ ಕಾನೂನಿನಲ್ಲಿ 11 ಜನ ರೈತ ಪ್ರತಿನಿಧಿಗಳು ಆಯ್ಕೆಯಾಗಿ ಬರಬೇಕೆನ್ನುವ ಒಂದು ನಿಯಮ ಇದೆ. ಆ 11 ಜನ ರೈತರೇ ಬಂದಿರುತ್ತಾರೆ. ಅದರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡುತ್ತೇವೆ. ಟ್ರೇಡರ್ ಅನ್ನು ಅಧ್ಯಕ್ಷರನ್ನಾಗಿ ಮಾಡುವ ಅವಕಾಶ ಅಲ್ಲಿ ಬರುವುದಿಲ್ಲ. ಮತ್ತು ಮಾನ್ಯ ಸದಸ್ಯರಾದ ಡಿ.ಆರ್ ಪಾಟೀಲರು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೂ ಸಹ ರಿಜರ್ವೇಷನ್ ಮಾಡಬೇಕೆಂದು ಹೇಳಿದರು. ಅದು ಸಹ ಸರ್ಕಾರದ ಪರಿಶೀಲನೆಯಲ್ಲಿದೆ. ಅದಷ್ಟು ಬೇಗ ಆ ಒಂದು ತಿದ್ದುಪಡಿಯನ್ನು ತರುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ(ಕುದುವನಹಳ್ಳಿ):- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು:- ಮಾನ್ಯ ಅಧ್ಯಕ್ಷರೇ, ಟ್ರೇಡರ್‌ನ್ನು ಅಧ್ಯಕ್ಷರನ್ನಾಗಿ ಮಾಡಬಾರದು ಎಂದು ಕಾನೂನಿನಲ್ಲಿಯೇ ಇದೆ.

ಶ್ರೀ ಕೆ. ಶ್ರೀನಿವಾಸಗೌಡ(ಕುದುವನಹಳ್ಳಿ):- ಆ ಕೆಟಗರಿಯಲ್ಲಿ ಯಾರೂ ಬರಲಿಲ್ಲವೆಂದಾಗ ಅದನ್ನೇ ಒಂದು ಕುಂಟು ನೆಪ ಕೊಟ್ಟು ಚುನಾವಣೆ ಮಾಡಬಾರದು ಎನ್ನುವುದೇ ನನ್ನ ಉದ್ದೇಶ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ ನಮ್ಮ ಮೂಲ ಉದ್ದೇಶವೇನೆಂದರೆ ಟ್ರೇಡರ್ ಅಧ್ಯಕ್ಷನಾಗಬಾರದು. ರೈತ ಪ್ರತಿನಿಧಿಗಳು ಆಗಬೇಕೆಂದು ಇದೆ. ಆದರೆ ಅಲ್ಲಿ ದುರ್ಬೈವದಿಂದ ಏನು ನಡೆಯುತ್ತಿದೆ ಅಂದರೆ ಒಮ್ಮೊಮ್ಮೆ ಈಕ್ವಲ್ ಆಗುತ್ತಾರೆ. ಆ ಟ್ರೇಡರ್ ಯಾರನ್ನು ಹೇಳುತ್ತಾನೋ ಅವನು ನಡೆಸಿಕೊಂಡು ಹೋಗುತ್ತಾನೆ. ಆ ಕಾರಣದಿಂದ ಟ್ರೇಡರ್‌ಗೆ ಅಲ್ಲಿ ವೋಟೀಂಗ್ ರೈಟ್ಸ್ ಇರಬಾರದು. ಅದನ್ನು ದಯವಿಟ್ಟು ಪರಿಶೀಲನೆ ಮಾಡಿ. ಆ ರೈತ ಪ್ರತಿನಿಧಿಗಳಲ್ಲಿಯೇ ಚುನಾವಣೆ ನಡೆಯಬೇಕು.

ಅಧ್ಯಕ್ಷರು:- ಪಾಟೀಲರೇ ಆಯಿತು ಬಿಡಿ ಮಾನ್ಯ ಮಂತ್ರಿಗಳು ಸಮಂಜಷವಾಗಿ ಉತ್ತರ ಕೊಟ್ಟಿದ್ದಾರೆ. ಈಗ ವಿಧೇಯಕವನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೇಂದರೆ, "2002ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 9ರವರೆಗೆ ಎರಡೂ ಸೇರಿದಂತೆ,

ಅಧ್ಯಕ್ಷರು:- "ಖಂಡ 2 ರಿಂದ 9ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 9ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ.

ಅಧ್ಯಕ್ಷರು:- ಪ್ರಸ್ತಾವ ಏನೇಂದರೆ, "ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೇಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಸಲ್ಪಟ್ಟಿತು

ಪ್ರಸ್ತಾವದ ಅಂಗೀಕಾರ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು:- (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೇ "2002ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ "2002ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು. ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು:- ಈಗ ಸದನವನ್ನು ಮಧ್ಯಾಹ್ನ 3.30ರವರೆಗೆ ಮುಂದೂಡುತ್ತಿದ್ದೇನೆ.

(ಸದನವು 2-18 ಗಂಟೆಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.30 ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಿತು.)

(ಸದನವು 3-40 ಗಂಟೆಗೆ ಸಮಾವೇಶಗೊಂಡಿತು. ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಕೋರಿ ಒಂದು ವಿಷಯವನ್ನು ನಾನು ಪ್ರಸ್ತಾಪ ಮಾಡಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):- ಮಾನ್ಯ ಅಧ್ಯಕ್ಷರೇ, 2002ನೇ ಸಾಲಿನ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕವನ್ನು ತೆಗೆದುಕೊಳ್ಳಬೇಕಾಗಿದೆ.

ಅಧ್ಯಕ್ಷರು:- ಈಗ ಪ್ರಥಮವಾಗಿ 2002-03ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲಕಂತು) ಮಂಡಿಸಬೇಕಾಗಿದೆ. ಮೊದಲು ಅದನ್ನು ತೆಗೆದುಕೊಳ್ಳೋಣ.

5) ವಿತ್ತೀಯ ಕಾರ್ಯಕಲಾಪ

2002-03ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮಂಡನೆ

ಶ್ರೀ ಕಾಗೋಡು ತಿಮ್ಮಪ್ಪ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು 2002-03ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ಮಂಡಿಸಲಾಯಿತು. ಈಗ ಮಾನ್ಯ ದೇಶಪಾಂಡೆಯವರು ಹೇಳಿ.

6) ಶಾಸನ ರಚನೆ

ಅ) 2002ನೇ ಸಾಲಿನ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕ.

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಹಾಗೂ ಮಧ್ಯಮ ಕೈಗಾರಿಕಾ ಸಚಿವರು):- ಮಾನ್ಯ ಅಧ್ಯಕ್ಷರೆ, "2002ನೇ ಸಾಲಿನ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".....